

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 06 | Issue : 299 | Thursday 18-04-2024 | E-mail : maruti.b.hosamani76@gmail.com | Page: 4 | Price : Rs. 1/-


## ಮೊಳಕಾಲ್ಮುರು ಕ್ಷೇತ್ರದಲ್ಲಿ ಬೇರೆ ಬೇರೆ ಪಕ್ಷದ ಮತದಾರರು ಕಾಂಗ್ರೇಸ್ ಪಕ್ಷಕ್ಕೆ ಸೇರ್ಪಡೆಯಾಗಿ ಶಾಸಕರಿಗೆ ಕೈ ಬಲ ಪಡಿಸಿದರು



**ಮೊಳಕಾಲ್ಮುರು :** ಕಾಂಗ್ರೆಸ್ನ ತತ್ವ ಸಿದ್ಧಾಂತಗಳು ತತ್ವಾದರ್ಶಗಳು,ಶಾಸಕರ ಅಭಿವೃದ್ಧಿ ಕಾರ್ಯವೈಖರಿ ರೈತರಿಗೆ ಬೆಳೆ ಪರಿಹಾರ ಇನ್ಶೂರೆನ್ಸ್ ಕುಡಿಯುವ ನೀರಿನ ವ್ಯವಸ್ಥೆ ದನ ಕರುಗಳಿಗೆ ಮೇವು ನೀರು ವ್ಯವಸ್ಥೆ ಬೀಜ ಮತ್ತು ಕೃಷಿ ಇಲಾಖೆಯಿಂದ ಸರ್ಕಾರ ದಿಂದ ಬರ್ತಕಂತ ಪಿಎಂ ಕಿಸಾನ್ ಯೋಜನೆ ಆಗಿರಬಹುದು ರೈತರಿಗೆ ತಾಡಪಲ್ ಗೊಬ್ಬರ ಸ್ಪಿಂಕ್ಲರ್ ಪೈಪುಗಳು ನಿಜವಾದಂತ ರೈತರಿಗೆ ಅನುಕೂಲ ಮಾಡಿಕೊಟ್ಟಂತ ಶಾಸಕರು ಮತ್ತು ಕೃಷಿ ಹೊಂಡಗಳು ಕೃಷಿಭಾಗ್ಯ ಟಿಲ್ಲರ್ ನೇಗಿಲಗಳು ಮತ್ತು ಗ್ರಾಮಗಳಿಗೆ ಮೂಲಭೂತ ಸೌಕರ್ಯಗಳು ಬರ ನಿರ್ವಹಣೆ ಎಲ್ಲಾ ಜನ ಸಾಮಾನ್ಯರಿಗೆ ಅನುಕೂಲ ಮಾಡಿ ಕೊಡುವ ಶಾಸಕರು ಯಾರಾದರೂ ಇದ್ದರೆ ಅದು ಕರ್ನಾಟಕದಲ್ಲಿ ಮೊಳಕಾಲ್ಮೂರು ಕ್ಷೇತ್ರದ ಎನ್ ವೈ ಗೋಪಾಲಕೃಷ್ಣ ಶಾಸಕರಿಗೆ ಮಾತ್ರ ಸಲ್ಲುತ್ತೆ ರೈತರ ಕಷ್ಟ ಬಡವರು ಮತ್ತು ಎಲ್ಲಾ ಜನ ಸಾಮಾನ್ಯರ ಕಷ್ಟಗಳನ್ನು ಅರಿತಂತಾ ಶಾಸಕರು ಮತ್ತು ರೈತರ ಕಷ್ಟ ಏನು ಎಂಬುವುದು ಅರ್ಥ ಮಾಡಿ ಕೊಳ್ಳುವ ಶಾಸಕರು ನೇರ ನುಡಿ ಮಾತುಗಳು ಇರುವುದರಿಂದ ಬೇರೆ ಪಕ್ಷದವರು ಬಂದು ಎನ್ ವೈ ಗೋಪಾಲಕೃಷ್ಣ ಶಾಸಕರ ಮನಸು ಮತ್ತು ಅಭಿವೃದ್ಧಿ ನೋಡಿ ಕಾಂಗ್ರೆಸ್ ಪಕ್ಷಕ್ಕೆ ನಾ ಮುಂದು ತಾ ಮುಂದು ಎಂದು ಕಾಂಗ್ರೆಸ್ ಪಕ್ಷಕ್ಕೆ ಮತದಾರರು ಸೇರ್ಪಡೆ ಆಗಿರುತ್ತಾರೆ ಪ್ರೇರಿತರಾದ ಬಿಜೆಪಿ ಪಕ್ಷದ ತಮ್ಮೇನಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ವಿವಿಧ ಗ್ರಾಮಗಳ ಹಾಗೂ ಕಾರ್ಯಕರ್ತರು, ನಾಯಕರು ಜನಪ್ರಿಯ ಶಾಸಕರಾದ ಸನ್ಮಾನ್ಯ ಶ್ರೀ ಎನ್ ವೈ ಗೋಪಾಲಕೃಷ್ಣ ಅವರ ನೇತೃತ್ವದಲ್ಲಿ ಇಂದು ಕಾಂಗ್ರೆಸ್ ಪಕ್ಷ ಸೇರ್ಪಡೆ ಗೊಂಡರು. ಎಲ್ಲರೂ ಆತ್ಮೀಯವಾಗಿ ಸ್ವಾಗತಿಸಿ, ಶುಭ ಹಾರೈಸಿದರು ಎಂದು ವರದಿಯಾಗಿದೆ.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ತಿಪ್ಪೇಸ್ವಾಮಿ. ಹೊಂಬಾಳೆ ಮೊಳಕಾಲ್ಮೂರು**

## ನರೇಂದ್ರ ಮೋದಿ ಅವರು ದೇಶದ ಪ್ರಧಾನಿ ಆಗುವುದು ನಿಶ್ಚಿತ: ಬಿ.ಎಸ್. ಯಡಿಯೂರಪ್ಪ



**ಕೂಡ್ಲಿಗಿ :** ಜನ ಮೋದಿ ಅವರ ಆಡಳಿತ ಮೆಚ್ಚಿ ಕೊಂಡಿದ್ದಾರೆ. ಈ ಬಾರಿ ರಾಜ್ಯದ 28 ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲ್ಲುವುದು ಖಚಿತ, ನರೇಂದ್ರ ಮೋದಿ ಅವರು ದೇಶದ ಪ್ರಧಾನಿ ಆಗುವುದು ನಿಶ್ಚಿತ ಎಂದರು. ತಾಲೂಕಿನ ಕಾನ ಹೊಸ ಹಳ್ಳಿಯಲ್ಲಿ ನಡೆದ ಬಳ್ಳಾರಿ ಲೋಕಸಭಾ ಚುನಾವಣೆ ಭಾರತೀಯ ಜನತಾ ಪಾರ್ಟಿಯ ಕೂಡ್ಲಿಗಿ ಮಂಡಲ ವಿಜಯನಗರ ಜಿಲ್ಲೆ ಲೋಕಸಭಾ ಚುನಾವಣೆ ಪ್ರಚಾರ ಸಭೆಯಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಮಾತನಾಡಿದ ಅವರು, ಬಳ್ಳಾರಿ ಬಿಜೆಪಿ ಅಭ್ಯರ್ಥಿ ಶ್ರೀರಾಮುಲು ಅವರು ಭಾರಿ ಅಂತರದಿಂದ ಗೆಲುವು ಸಾಧಿಸಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ನಾನು 82 ವರ್ಷವಾದರೂ ರಾಜ್ಯದ ಉದ್ದಗಲಕ್ಕೂ ಓಡಾಡುತ್ತಿದ್ದೇನೆ. ದೇವರು ಶಕ್ತಿ ಕೊಟ್ಟರೆ ಇನ್ನೂ ಒಂದು ಲೋಕಸಭೆ ಚುನಾವಣೆ, ವಿಧಾನಸಭೆ ಚುನಾವಣೆ ನಡೆಸುತ್ತೇನೆ ಎಂದು ತಿಳಿಸಿದರು. ರೈತರಿಗೆ ಕಿಸಾನ್ ಸಮ್ಮಾನ್ ಯೋಜನೆ ಅಡಿಯಲ್ಲಿ 4ಸಾವಿರ ರೂ. ನಾನು ಕೊಡುತ್ತಿದ್ದೆ, ಕೊಡುವುದನ್ನು ಸಿದ್ಧರಾಮಯ್ಯ ಸರ್ಕಾರ ನಿಲ್ಲಿಸಿದೆ. ಇದಷ್ಟೇ ಅಲ್ಲ, ದುಡ್ಡಿಲ್ಲದೆ ಕಾಂಗ್ರೆಸ್ ಸರ್ಕಾರ ಭಾಗ್ಯ ಲಕ್ಷ್ಮಿ ಯೋಜನೆ, ಹಾಲು ಉತ್ಪಾದನೆ ಪ್ರೋತ್ಸಾಹ ಧನ ಸೇರಿದಂತೆ ಹಲವು ಯೋಜನೆಗಳನ್ನು ನಿಲ್ಲಿಸಿದೆ. ಕಾಂಗ್ರೆಸ್ ರೈತ ವಿರೋಧಿಯಾಗಿದೆ ಎಂದು ಕಿಡಿ–ಕಾರಿದರು. ಈ ಸಂದರ್ಭದಲ್ಲಿ ಲೋಕಸಭಾ ಬಿಜೆಪಿ ಅಭ್ಯರ್ಥಿ ಶ್ರೀರಾಮುಲು ಮಾತನಾಡಿ ಕೂಡ್ಲಿಗಿ ಕ್ಷೇತ್ರದಲ್ಲಿ 74 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ನಿರ್ಮಾಣದ ಪ್ರಯತ್ನ ನಮ್ಮ ಸರ್ಕಾರದ ಅವಧಿಯಲ್ಲಿ ಆಗಿತ್ತು. ಆದರೆ ಕಾಂಗ್ರೆಸ್ ಸರ್ಕಾರ 10 ತಿಂಗಳಾದರೂ ಕಾಮಗಾರಿ ಪೂರ್ಣಗೊಂಡಿಲ್ಲ ಎಂದು ಕಿಡಿಗಾಡಿದರು. ನಾನು ಕಳೆದ ಬಾರಿ ಸೋಲಿಸಿದ್ದಕ್ಕೆ ಜನ ತುಂಬಾ ನೋವು ಪಟ್ಟಿದ್ದಾರೆ. ಶ್ರೀರಾಮುಲು ರಾಜಕಾರಣದಿಂದ ಕಳೆದು ಹೋಗಬಾರದು, ಶ್ರೀರಾಮುಲು ಜನರ ಮಧ್ಯೆ ಇರಬೇಕು. ಕಳೆದ ಮೂವತ್ತು ವರ್ಷಗಳಿಂದ ಶ್ರೀರಾಮುಲು ರಾಜಕಾರಣದಲ್ಲಿದ್ದು, ಜನ ಸೇವೆ ಮಾಡಿದ್ದಾರೆ. ಅನೇಕ ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದಾರೆ ಎಂಬುದು ಜನತೆಯ ಅಭಿಪ್ರಾಯ. ಹಾಗಾಗಿ ಈ ಸಾರಿ ಜನ ಸಂಕಲ್ಪ ಮಾಡಿ ನನ್ನನ್ನು ಗೆಲ್ಲಿಸಲಿದ್ದಾರೆ, ಕೈ ಬಿಡುವ ಪ್ರಶ್ನೆಯೇ ಇಲ್ಲ ಎಂದರು, ಎಲ್ಲೆಡೆ ಪ್ರಧಾನಿ ನರೇಂದ್ರ ಮೋದಿ ಪರ ಗಾಳಿ ದಿನ ದಿನಕ್ಕೂ ಬಿರುಗಾಳಿಯಾಗಿ ಬೀಸುತ್ತಿದೆ. ಮೋದಿಯವರು ಮತ್ತೊಮ್ಮೆ ಪ್ರಧಾನಿ ಆಗುವುದು ನಿಶ್ಚಿತ. ಅವರಿಗೆ ಶಕ್ತಿ ತುಂಬಲು ಚುನಾವಣೆಯಲ್ಲಿ ನನ್ನನ್ನು ಆಯ್ಕೆ ಮಾಡಿ ಎಂದು ಮನವಿ ಮಾಡಿದರು.

ಈ ವೇಳೆ ಅರುಣಾ ಲಕ್ಷ್ಮೀ ಜನಾರ್ದನ ರೆಡ್ಡಿ ಮಾತನಾಡಿ ಸೂರ್ಯ ಚಂದ್ರ ಇರೋದು ಎಷ್ಟು ಸತ್ಯವೋ ಮೋದಿ ಪ್ರಧಾನಿ ಆಗೋದು ಸತ್ಯ ಎಂದರು. ನನ್ನ ಸೋದರ ಅಣ್ಣನಾದ ಶ್ರೀರಾಮುಲು ಅವರು ಸಚಿವರ ಆರೋಗ್ಯ ಸಚಿವರ ಆದಾಗ ಇಡೀ ರಾಜ್ಯಕ್ಕೆ 108 ಆಂಬುಲೆನ್ಸ್ ಗಳನ್ನು ಕೊಡುಗೆ ಕೊಟ್ಟಿದ್ದರು, ಅವಳಿ ಜಿಲ್ಲೆಯ ಕ್ಷೇತ್ರಕ್ಕೆ ಅವರ ಕೊಡುಗೆ ಅಪರವಾಗಿದೆ. ಹಾಗಾಗಿ ಅವರನ್ನು ಹೆಚ್ಚಿನ ಮತಗಳಿಂದ ಗೆಲ್ಲಿಸಬೇಕಾಗಿ ಮತದಾರರಲ್ಲಿ ಮನವಿ ಮಾಡಿದರು.

ರಾಜ್ಯಕ್ಕೆ ಪ್ರಥಮ ರಾಂಕ್ ಪಡೆದ ವಿದ್ಯಾರ್ಥಿ ಚೌಡಾಪುರ ಗ್ರಾಮದ ಕವಿತಾ ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ ಕಲಾ ವಿಭಾಗದಲ್ಲಿ 600ಕ್ಕೆ 596 ಅಂಕ ಗಳಿಸುವ ಮೂಲಕ ಕರ್ನಾಟಕ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗೆ ಬಿ ಮಾಜಿ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ಅವರು ಅಭಿನಂದಿಸಿ ವಿದ್ಯಾರ್ಥಿಗೆ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಮಾಜಿ ಸಚಿವರು, ಬಿಜೆಪಿ ಲೋಕಸಭೆ ಅಭ್ಯರ್ಥಿ ಶ್ರೀರಾಮುಲು, ಬಂಗಾರು ಹನುಮಂತು, ಲಕ್ಷ್ಮೀ ಅರುಣಾ ಜನಾರ್ದನ ರೆಡ್ಡಿ, ಬಿಜೆಪಿ ಜಿಲ್ಲಾ ಉಸ್ತುವಾರಿ ಎಂ ಎಲ್ ಸಿ ರವಿಕುಮಾರ್ . ಚಂದ್ರಶೇಖರ್ ಅಲಗೇರಿ.ಬಿಜೆಪಿ ಜಿಲ್ಲಾಧ್ಯಕ್ಷ ಚೆನ್ನಬಸವನ ಗೌಡ್ರು. ಮಂಡಲದ ಬಿಜೆಪಿ ಉಸ್ತುವಾರಿ ಸೂರ್ಯ ಪಾಪಣ್ಣ. ಮಂಡಲ ಅಧ್ಯಕ್ಷ ಬಣವಿಕಲ್ ನಾಗರಾಜು. ನಿಕಟ ಪೂರ್ವ ಅಧ್ಯಕ್ಷ ಕೆ ಚನ್ನಪ್ಪ. ಮಾಜಿ ಜಿಲ್ಲಾ ಪಂಚಾಯತಿ ಸದಸ್ಯ ಹೊಂಬಾಳೆ ರೇವಣ್ಣ. ಮಾರಬದ ಶಿವಣ್ಣ. ಎಸ್ ಪಿ ಪ್ರಕಾಶ್. ಯುವ ಮುಖಂಡ ಗುಳಿಗೆ ವೀರೇಂದ್ರ .ಕೆ ಸುಭಾಷ್ ಚಂದ್ರ. ಎರಿಸ್ವಾಮಿ ರೆಡ್ಡಿ. ಕುಲುಮೆಹಟ್ಟಿ ವೆಂಕಟೇಶ್. ಚಂದ್ರ ಮೌಳಿ. ಜರ್ಮಲಿ ಶಶಿಧರ. ಕೋಡಿಹಳ್ಳಿ ಭೀಮಣ್ಣ. ಕೆಟಿ ಮಲ್ಲೇಶ್. ಕೆ ಜಿ ನಾಗರಾಜ ಗೌಡ. ಹನುಮಜ್ಜ ನಾಗೇಶ್. ಮಹಿಳಾ ಮೋರ್ಚಾ ಅಧ್ಯಕ್ಷ ಶಾರದ ಕುಂಬಾರ್. ರೇಖಾ ಮಲ್ಲಿಕಾರ್ಜುನ. ಗ್ರಾಮ ಪಂಚಾಯತಿ ಉಪಾಧ್ಯಕ್ಷ ನೇತ್ರಾವತಿ ಮಂಜುನಾಥ್. ಮಂಜುನಾಥ್. ಎಲ್ ಪವಿತ್ರ. ನೇತ್ರಾವತಿ. ಲಕ್ಷ್ಮಿ ಬಾಯಿ. ಮಂಡಲದ ಪ್ರಧಾನ ಕಾರ್ಯದರ್ಶಿ ಮಂಜುನಾಥ. ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಕೆಎಚ್ ಎಂ ಸಚಿನ್ ಕುಮಾರ್. ಕರಿ ವೀರಪ್ಪ. ಆಲೂರು ಕೆ. ಟಿ. ಮಲ್ಲಿಕಾರ್ಜುನ. ಯಂಬಳಿ ಗಂಗಣ್ಣ. ಭೀಮೇಶ್. ದುರ್ಗೇಶ್. ನಿರಂಜನ್ ಕುಮಾರ್ ಎ.ಸೇರಿದಂತೆ ಅನೇಕ ಬಿಜೆಪಿ ಮುಖಂಡರು ಕಾರ್ಯಕರ್ತರು ಯುವಕರು ಉಪಸ್ಥಿತರಿದ್ದರು. ಶ್ರೀರಾಮುಲು ಅಭಿಮಾನಿಗಳು. ನಾನಾ ಪಕ್ಷದ ಕಾರ್ಯಕರ್ತರು ಬಿ ಶ್ರೀರಾಮುಲು ಸಮ್ಮುಖದಲ್ಲಿ ಬಿಜೆಪಿ ಸೇರ್ಪಡೆ ಗೊಂಡರು.

**ಹೋಬಳಿ ವರದಿಗಾರರು ಹಾಗೂ ಎಸ್. ಕೆ ನ್ಯೂಸ್ ಕನ್ನಡ ಚಾನಲ್ : ಕೆ.ಎಸ್. ವೀರೇಶ್. ಕಾನಾ ಹೊಸಹಳ್ಳಿ**

## ಭಾರತದ ಹೆಮ್ಮೆಯ ಪುತ್ರ ಡಾ.ಬಿ.ಆರ್.ಅಂಬೇಡ್ಕರ

ಬಾಗಲಕೋಟೆ: ದೇಶಕ್ಕೆ ಸಂವಿಧಾನ ರಚಿಸುವ ಮೂಲಕ ಎಲ್ಲರೂ ಸಮಾನರಾಗಿ, ಘನತೆಯಿಂದ ಬದುಕುದಂತೆ ಮಾಡಿದ ಮಹಾನ ಮಾನತವಾದಿ, ಹೆಮ್ಮೆಯ ಪುತ್ರ ಡಾ.ಬಾಬಾ ಸಾಹೇಬ ಅಂಬೇಡ್ಕರ ಎಂದು ಜಿಲ್ಲಾಧಿಕಾರಿ ಜಾನಕಿ ಕೆ.ಎಂ ಹೇಳಿದರು.



ಜಿಲ್ಲಾಪಂಚಾಯತನೂತನಸಭಾಭವನದಲ್ಲಿ ರವಿವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡ ಡಾ.ಬಿ.ಆರ್.ಅಂಬೇಡ್ಕರ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪ ನಮನ ಸಲ್ಲಿಸಿ ನಂತರ ಮಾತನಾಡಿದ ಅವರು ನಾವೆಲ್ಲರೂ ಕೂಡಾ ಅಂಬೇಡ್ಕರ ಹಾಕಿಕೊಟ್ಟ ದಾರಿ, ಕನಸು ಹಾಗೂ ಅವರ ಅಶೋತ್ತರಗಳನ್ನು ಇಡೇರಿಸುವತ್ತ ಸಾಗಬೇಕಿದೆ ಎಂದರು.

ಅಂಬೇಡ್ಕರ ಹುಟ್ಟಿದ ದಿನವಾದ ಎಪ್ರೀಲ್ 14ನ್ನು ಬುದ್ದವಂತರ ದಿನವನ್ನಾಗಿ ಆಚ–ರಣೆ ಮಾಡುತ್ತಿದೆ. ಜ್ಞಾನದ ಬದಲಿಂದ ಅಜ್ಞಾನದ ಕೇಡು ನೋಡಯ್ಯ ಎಂಬ ಬಸವಣ್ಣನವರ ವಚನದಂತೆ ಅವಮಾನಗಳನ್ನು ಅನುಭವಿಸಿದಾಗ ಮಾತ್ರ ಮುಂದೆ ಸನ್ಮಾರ್ಗವನ್ನು ಹೊಂದಲು ಸಾದ್ಯವಾಗುತ್ತದೆ. ಶತಮಾನದ ಹಿಂದೆ ಅಂಬೇಡ್ಕರ ಸಾಕಷ್ಟು ತೊಂದರೆ, ಅವಮಾನಗಳನ್ನು ಅನುಭವಿಸಿ ಮುಂದೆ ಬಂದಿದ್ದಾರೆ. ಅವರು ನಡೆದು ಬಂದ ಹಾದಿಯಲ್ಲಿಹಾಗೂಅವರಮಾರ್ಗದರ್ಶನ, ತತ್ವಸಿದ್ದಾಂತ ಅಳವಡಿಸಿಕೊಳ್ಳುವ ಮೂಲಕ ಬದುಕನ್ನು ಸ್ವಾರ್ಥಕ ಪಡಿಸಿಕೊಳ್ಳಬೇಕು ಎಂದರು.

ದೇವರ ದೃಷ್ಟಿಯಲ್ಲಿ ಎಲ್ಲರೂ ಸಮಾನರು. ಅದೇ ರೀತಿ ಮನುಷ್ಯರ ದೃಷ್ಟಿಯಲ್ಲಿಯೂ ಎಲ್ಲರೂ ಸಮಾನರಾಗಬೇಕಿದೆ. ಸುಂದರ ಸಮಾಜ ಕಟ್ಟುವಲ್ಲಿ ಅವರ ಕನಸು ನನಸು ಮಾಡುವ ಮೂಲಕ ಆದರ್ಶ ಸಮಾಜ ನಿರ್ಮಾಣ ಮಾಡಬೇಕು. ಯಾರು ಶ್ರೇಷ್ಠ, ಕನಿಷ್ಟ ಅಲ್ಲ. ನಮ್ಮ ಮನಸ್ಥಿತಿ ಬದಲಾವಣೆಯಾಗಬೇಕು. ಅಂಬೇಡ್ಕರ ಅವರ ಕನಸು, ತ್ಯಾಗಕ್ಕೆ ಅರ್ಥ ಬರುವ ರೀತಿಯಲ್ಲಿನಡೆದುಕೊಂಡು ಅವರ ಜನ್ಮದಿನ ಸ್ಫೂರ್ತಿಯಾಗಬೇಕು ಎಂದು ಹೇಳಿದರು.

ಉಪನ್ಯಾಸಕರಾಗಿ ಆಗಮಿಸಿದ್ದ ಶಾಲಾ ಶಿಕ್ಷಣ ಇಲಾಖೆಯ ಶಿಕ್ಷಣಾಧಿಕಾರಿ ಹನಮಂತಗೌಡ ಮಿರ್ಜಿ ಮಾತನಾಡಿ ವಿಶ್ವದ ಅಗ್ರಮಾನ್ಯ, ವಿಶೇಷ ವ್ಯಕ್ತಿಯಾದ ಡಾ.ಬಿ.ಆರ್.ಅಂಬೇಡ್ಕರ ಅವರು 1891ರಲ್ಲಿ ಮದ್ಯಪ್ರದೇಶದ ಮಾಹೋ ಎಂಬ ಊರಿನಲ್ಲಿ ಜನಿಸಿದವರು. ಅವರ ಬಾಲ್ಯ ಜೀವನ ಕಷ್ಟಕರಾಗಿದ್ದು, 14 ಜನ ಮಕ್ಕಳಲ್ಲಿ ಕೊನೆಯ ಮಗುವೇ ಅಂಬೇಡ್ಕರ. ಕಷ್ಟದಿಂದ ಮೇಲೆ ಬಂದವರು. ಅವರ ಜೀವನ ತ್ಯಾಗ ಮಾಡಿ ಇತರರಿಗೆ ಬೆಳಕನ್ನು ನೀಡಿದವರು. ಚಿಕ್ಕ ವಯಸ್ಸಿನಲ್ಲಿ ಮದುವೆಯಾದರು ಶಿಕ್ಷಣವನ್ನು ಮುಂದುವರೆಸಿದ್ದರು ಎಂದು ತಿಳಿಸಿದರು. ಭಾರತದ ಸಂವಿಧಾನ ಸಮಗ್ರ ವಿಷಯಗಳ ನಿರ್ದೇಶನ ನೀಡುವ ಮಾರ್ಗಸೂಚಿಯಾಗಿದ್ದು, ಇದರ ರಚನೆಯಲ್ಲಿ ಅಂಬೇಡ್ಕರ ಅವರಿಗಿದ್ದ ಪ್ರಬುತ್ವತೆ ಎತ್ತಿ ತೋರಿಸುತ್ತದೆ. ಅಂಬೇಡ್ಕರ ಒಬ್ಬ ಶ್ರೇಷ್ಠ ಅರ್ಥಶಾಸ್ತ್ರಜ್ಞರಾಗಿದ್ದು, ದೇಶ–ವಿದೇಶಗಳಲ್ಲಿಯೂ ಆಗು ಹೋಗುಗಳನ್ನು ಗಮನದಲ್ಲಿಟ್ಟುಕೊಂಡು ನಮಗೆ ಬೇಕಾಗುವಂತ ಸಂವಿಧಾನ ರಚಿಸಿದ್ದಾರೆ. ಅವರು ರಚಿಸಿದ ಸಂವಿಧಾನ ಹಿಂದಿನ, ಇಂದಿನ ಹಾಗೂ ಮುಂದಿನ ಜನಾಂಗಕ್ಕೆ ಮಾರ್ಗಸೂಚಿಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ವ–ರಿಷ್ಟಾಧಿಕಾರಿ ಅಮರನಾಥ ರೆಡ್ಡಿ, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ, ಅಪರ ಜಿಲ್ಲಾಧಿಕಾರಿ ಪರಶುರಾಮ ಶಿನ್ನಾಳಕರ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ನಂದಾ ಹಣಮರಟ್ಟಿ, ಸಮುದಾಯದ ಮುಖಂಡರಾದ ಯಲ್ಲಪ್ಪ ಸನಕ್ಯಾನವರ, ವಾಯ್.ವಾಯ್. ತಿಮ್ಮಾಪೂರ,

ಗುರುಶಾಂತಪ್ಪ ಮದಿನಕರ, ಅಡಿಯಪ್ಪ ಚಂದಾವರಿ, ಹನಮಂತ ಚಿಮ್ಮಲಗಿ, ಎಚ್.ಎನ್.ನೀಲನಾಯಕ, ಸದಾನಂದ ಮಳ್ಳೇನ್ನವರ, ಶಂಕರ ಚಂದಾವರ ಸೇ–ರಿದಂತೆ ಇತರರು ಉಪಸ್ಥಿತರಿದ್ದರು. ಪ್ರಾರಂಭದಲ್ಲಿ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ಅಂಬೇಡ್ಕರ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಯಿತು.

## ನರೇಗಾ ಕೂಲಿಯಿಂದಲೇ ಉತ್ತಮ ಜೀವನ



**ತೂಲಹಳ್ಳಿ :** ವಿಜಯನಗರ ಜಿಲ್ಲೆಯ ಕೊಟ್ಟೂರು ತಾಲೂಕಿನ ದಿನಾಂಕ 16.4.2024 ರಂದು ತೂಲಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಎಂ ವೀರೇಶ ತಂದೆ ಸಿದ್ದಪ್ಪ ಎಂಬುವರ ಹೊಲದಲ್ಲಿ ಕೃಷಿ ಹೊಂಡ ನಿರ್ಮಾಣ ಸಂದರ್ಭದಲ್ಲಿ ಕೂಲಿ ಕಾರ್ಮಿಕರನ್ನು ಕುರಿತು ಹೊಸದಾಗಿ ನರೇಗಾ ಸಹಾಯವಾಣಿ ನಂಬರನ್ನು ತಿಳಿಸುತ್ತಾ ನಿಮ್ಮ ಕೂಲಿ ಕಾರ್ಯದಲ್ಲಿ ಯಾವುದೇ ರೀತಿ ತೊಂದರೆಗಳಾದರೆ ಈ ನಂಬರಿಗೆ ಕಾಲ್ ಮಾಡಿ ವಿಷಯ ತಿಳಿಯಬಹುದು ಮತ್ತು 2024 ರ ಲೋಕಸಭಾ ಚುನಾವಣೆಯಲ್ಲಿ ಮತದಾನ ಕಡ್ಡಾಯವಾಗಿ ಮಾಡಬೇಕು ಯಾವುದೇ ಭಯ ಭೀತಿ ಇಲ್ಲದೆ ನಿರ್ಭಿತರಾಗಿ ಮತ ಚಲಾಯಿಸಿ, ದೇಶದ ಅಭಿವೃದ್ಧಿಗೆ ಉತ್ತಮವಾದ ರಾಷ್ಟ್ರವನ್ನು ಮಾಡಲಿಕ್ಕೆ ಅನುಕೂಲವಾಗ ಬೇಕು ಎಂದು ಪಿಡಿಓ ಪ್ರಶಾಂತ್ ಕುಮಾರ್ ತಿಳಿಸಿದರು. ಒಂದು ತಿಂಗಳ ಕಾಲ ಕೃಷಿ ಹೊಂಡ ನಿರ್ಮಾಣದಲ್ಲಿ ಕೂಲಿ ಕಾರ್ಮಿಕರು ಸಫಲವಾಗಿ ಕಾರ್ಯನಿರ್ವಹಿಸಿ ನರೇಗಾ ಕೂಲಿಯಿಂದ ಗುಳೆ ಹೋಗದೆ ಜನರು ಉತ್ತಮವಾಗಿ ಜೀವನ ಸಾಗಿಸುತ್ತಿದ್ದಾರೆ ಇತರಹದ ಕೆಲಸವನ್ನು ನೀಡಿ ಅನುಕೂಲ ಮಾಡಿ ಕೊಟ್ಟಂತಹ ಅಧಿಕಾರಿಗಳಿಗೂ ಮತ್ತು ನಮ್ಮ ಘನ ಸರ್ಕಾರಕ್ಕೂ ವಂದನೆಗಳನ್ನು ತಿಳಿಸುತ್ತೇನೆ ಎಂದು ಕೊಟ್ರೇಶ್ ಕೆ ಕಾಯಕ ಬಂದು ಹೇಳಿದರು.

ಈ ಸಂದರ್ಭದಲ್ಲಿ ಡಿ ಭರಮನಗೌಡ ಅಧ್ಯಕ್ಷರು ಗ್ರಾಮ ಪಂಚಾಯಿತಿ ತೂಲಹಳ್ಳಿ ಮರಿಯಪ್ಪ ಸೆಕ್ರೆಟರಿ ಎಚ್ ನಾಗರಾಜ್ ಡಾಟಾ ಆಪರೇಟರ್ ಮತ್ತು ಕ್ಲರ್ಕ್ ಚಂದ್ರಶೇಖರ್ ಇಂಜಿನಿಯರ್ ಪ್ರಕಾಶ್ ಬಿಲ್ ಕಲೆಕ್ಟರ್ ಬಿ ಎಫ್ ಟಿ ದಾನಪ್ಪ ನಿವೇದಿತ ಜಿಕೆಎನ್ಎಂ ಕಾಯಕ ಬಂದು ಬಸವರಾಜ್ ಕೂಲಿ ಕಾರ್ಮಿಕರು ಉಪಸ್ಥಿರಿದ್ದರು.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಪ್ರದೀಪ್.ಕುಮಾರ್.ಸಿ ಕೊಟ್ಟೂರು.**

## ತಿಪ್ಪೇರುದ್ರಸ್ವಾಮಿ ಆಶ್ರಯದಲ್ಲಿ ತಾಯಿ ಮಗಳು ಆತ್ಮ ಹತ್ಯೆ, ನೀರಿನ ಸಂಪಿನಲ್ಲಿ ಮೃತದೇಹ ಪತ್ತೆ

**ತುರುವನೂರು :** ಚಿತ್ರದುಗ–ರ್ ನಗರದ ತುರುವನೂರು ರಸ್ತೆಯಲ್ಲಿರುವ ಶ್ರೀ ತಿಪ್ಪೇರುದ್ರಸ್ವಾಮಿ ಆಶ್ರಮದಲ್ಲಿ ತಾಯಿ ಮತ್ತು ಮಗಳು ಮೃತಪಟ್ಟಿದ್ದಾರೆ.



ಕೆಳಗೋಟೆಗೆ ಹೊಂದಿ ಕೊಂಡಿರುವ, ತುರುವನೂರು ರಸ್ತೆಯಲ್ಲಿರುವ ಶ್ರೀ ತಿಪ್ಪೇ ರುದ್ರಸ್ವಾಮಿ ಆಶ್ರಮದಲ್ಲಿರುವ ನೀರಿನ ಸಂಪಿನಲ್ಲಿ ಮಗಳ ಮೃತದೇಹ ಪತ್ತೆಯಾದರೆ, 200 ಲೀಟರ್ ನೀರಿನ ಡ್ರಮ್ಮಿನಲ್ಲಿ ತಾಯಿಯ ಮೃತ ದೇಹ ಪತ್ತೆಯಾಗಿದೆ.

ಶಿವಮೊಗ್ಗ ಜಿಲ್ಲೆ, ಭದ್ರಾವತಿ ಮೂಲದ ಸುರೇಶ್ ಎಂಬುವವರ ಪತ್ನಿ ಗೀತಾ (40) ಹಾಗೂ ಪುತ್ರಿ ಪ್ರಿಯಾಂಕ(22) ಶವವಾಗಿ ಪತ್ತೆಯಾಗಿದ್ದಾರೆ.

ಮಂಗಳವಾರ ರಾತ್ರಿ ವೇಳೆ ಈ ಘಟನೆ ನಡೆದಿದ್ದು, ಮಾಹಿತಿ ತಿಳಿದ ತಕ್ಷಣ ಸ್ಥಳಕ್ಕೆ ಆಗಮಿಸಿದ ಪೊಲೀಸರು ತಡರಾತ್ರಿ 1 ಗಂ–ಟೆ ವರೆಗೆ ಮಹಜರ್ ನಡೆಸಿ ಮೃತದೇಹಗಳನ್ನು ಶವಾಗಾರಕ್ಕೆ ಸ್ಥಳಾಂತರ ಮಾಡಿಸಿದ್ದಾರೆ.


ಕಳೆದ ಮೂರ್ನಾಲ್ಕು ವರ್ಷದಿಂದ ತಿಪ್ಪೇರುದ್ರಸ್ವಾಮಿ ಆಶ್ರಮದಲ್ಲಿ ನೆಲೆಸಿದ್ದ ಸುರೇಶ್ ಹಾಗೂ ಗೀತಾ ಕುಟುಂಬ ದೇವಸ್ಥಾನದಲ್ಲಿ ಪೂಜೆ ಮಾಡಿಕೊಂಡು ಜೀವನ ನಡೆಸುತ್ತಿದ್ದರು.

ಮಂಗಳವಾರ ಸಂಜೆ ಗೀತಾ ಅವರ ಪತಿ ಸುರೇಶ್ ಹಾಗೂ ಪುತ್ರ ಮೋಹನ್ ಆಶ್ರಮದಿಂದ ಹೊರಗೆ ತೆರಳಿದ್ದರು, ರಾತ್ರಿ ವಾಪಾಸು ಬಂದಾಗ ಇಬ್ಬರು ಮೃತ ಪಟ್ಟಿರುವುದು ಗೊತ್ತಾಗಿದೆ. ಸಾವಿನ ಬಗ್ಗೆ ಅನುಮಾನ ವ್ಯಕ್ತವಾಗಿದ್ದು, ಚಿತ್ರದುರ್ಗ ನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿ ಕೊಂಡು ತನಿಖೆ ಕೈಗೊಂಡಿದ್ದಾರೆ.

ಇಂತಹ ಅಮಾನವೀಯ ಘಟನೆಗಳು ನಮ್ಮ ಜಿಲ್ಲೆಯಲ್ಲಿ ಮತ್ತೊಮ್ಮೆ ಮರುಕಳಿಸದಿರಲಿ ಎನ್ನುವುದೇ ನಮ್ಮ ಆಶಯ.

**ವರದಿ:ಶಿವಮೂರ್ತಿ.ಟಿ. ಕೋಡಿಹಳ್ಳಿ ಚಳ್ಳಕೆರೆ**

## ಭೋಗಾಪುರೇಶ್ವರ ದೇವಸ್ಥಾನಕ್ಕೆ ಕ್ಯಾವಟರ್ ಭೇಟಿ



**ಕೊಪ್ಪಳ :** ನವಲಿಯ ಐತಿಹಾಸಿಕ ಭೋಗಾಪುರೇಶ್ವರ ದೇವಸ್ಥಾನಕ್ಕೆ ಸೋಮವಾರ ಕೊಪ್ಪಳ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಬಸವರಾಜ ಕ್ಯಾವಟರ್ ಭೇಟಿ ನೀಡಿ ದೇವರ ದರ್ಶನ ಪಡೆದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ನವಲಿ ಸೇರಿ ಸುತ್ತಲಿನ ಗ್ರಾಮಗಳಲ್ಲಿ ಭೋಗಾಪುರೇಶ್ವರ ದೇವಸ್ಥಾನ ಪ್ರಸಿದ್ಧ ಪಡೆದಿದೆ. ಈ ಭಾಗದ ಆರಾಧ್ಯ ದೈವ ಭೋಗಾಪುರೇಶ್ವರ ದೇವಸ್ಥಾನ ಅಭಿವೃದ್ಧಿಗೆ ಬಿಜೆಪಿ ಸದಾ ಸಿದ್ಧವಿದೆ ಎಂದರು.

ಇದೇ ವೇಳೆ ಭೋಗಾಪುರೇಶ್ವರ ದೇವರಿಗೆ ವಿಶೇಷ ಪೂಜೆ ಸಲ್ಲಿಸಿ, ರಥಕ್ಕೆ ಉತ್ತತ್ತಿ ಎಸೆದರು.

ಈ ವೇಳೆ ಬಿಜೆಪಿಯ ಮಂಡಲದ ಅಧ್ಯಕ್ಷ ಜಡಿಯಪ್ಪ ಮುಕ್ಕುಂದಿ, ನವಲಿ ಬಿಜೆಪಿಯ ಹಿರಿಯ ಮುಖಂಡರಾದ

ಪಂಚೆಯಸ್ವಾಮಿ ಸಿದ್ದನೂರಮಠ್, ಭೀಮನಗೌಡ ಹರ್ಲಾಪುರ, ಲಿಂಗಪ್ಪ ನಾಯಕ, ವೀರೇಶ್ ನಾಗವಂಶಿ, ನವಲಿ ಶಕ್ತಿ ಕೇಂದ್ರದ ಅಧ್ಯಕ್ಷ ಶಿವಯ್ಯಸ್ವಾಮಿ, ಗ್ರಾಪಂ ಸದಸ್ಯ ದುರ್ಗಣ್ಣ ಭಜಂತ್ರಿ, ರಮೇಶ್ ಕಂಬಳಿ, ಸಂಗಮೇಶ್, ಜಡಿಯಪ್ಪ, ರಾಮಣ್ಣ ಗಾಳಿ, ಹನುಮಂತ ಕಾರಟಗಿ, ಮಂಜು ಹರ್ಲಾಪುರ ಮತ್ತಿತರರಿದ್ದರು.

## ಎಪಿಎಂಸಿ ದಲಾಲ ವರ್ತಕರ ಸಂಘಕ್ಕೆ ನೂತನ ಅಧ್ಯಕ್ಷರಾಗಿ ಮಹಾಲಿಂಗಪ್ಪ ಕೋಳಿಗುಡ್ಡ ಆಯ್ಕೆ



**ಮಹಾಲಿಂಗಪುರ :** ಸ್ಥಳಿಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ದಲಾಲ ವರ್ತಕರ ಸಂಘಕ್ಕೆ 2024–25 ನೇ ಸಾಲಿಗೆ ನೂತನ ಅಧ್ಯಕ್ಷರಾಗಿ ಮಹಾಲಿಂಗಪ್ಪ ಕೋಳಿಗುಡ್ಡ, ಉಪಾಧ್ಯಕ್ಷರಾಗಿ ಬಾಲಕೃಷ್ಣ ಮಾಳವದೆ, ಕಾರ್ಯದರ್ಶಿಯಾಗಿ ಎಸ್.ಆಯ್.ನುಚ್ಚಿ, ಖಜಾಂಚಿಯಾಗಿ ಶಿವಾನಂದ ಹುಬ್ಬಳ್ಳಿ, ಸದಸ್ಯರಾಗಿ ಕೇದಾರಿ ಹುರಕಡ್ಲಿ, ವಿನಯ ಚಮಕೇರಿ, ಮಹಾಂತೇಶ ಘಟ್ನಟ್ಟಿ ಆಯ್ಕೆಯಾಗಿದ್ದಾರೆ.

## ತೇರದಾಳದಲ್ಲಿ ಪ್ರಭುದೇವರ ಜಯಂತಿ



**ತೇರದಾಳ :** 12ನೇ ಶತಮಾನದ ಅನುಭವ ಮಂಟಪದ ಪೀಠಾಧ್ಯಕ್ಷ ಪಟ್ಟಣದ ಕ್ಷೇತ್ರಾಧಿಪತಿ ಅಲ್ಲಮಪ್ರಭುದೇವರ ಜಾತ್ರಾ ಮಹೋತ್ಸವ ಪ್ರತಿ ವರ್ಷದಂತೆ ಯುಗಾದಿ ಪಾಡ್ಯೆಯಂದು ಸಂಭ್ರಮದಿಂದ ಜರುಗಿತು.

ಜಯಂತಿ ನಿಮಿತ್ತ ನಸುಕಿನ ಜಾವ ದೇವಸ್ಥಾನದಲ್ಲಿ ರುದ್ರಾಭಿಷೇಕ, ಅಲಂಕಾರಿತ ಪೂಜೆ ಸೇರಿದಂತೆ ಹಲವು ಧಾರ್ಮಿಕ ಕಾರ್ಯಕ್ರಮಗಳು ದೇವಸ್ಥಾನ ಅರ್ಚಕರಿಂದ ಜರುಗಿದವು. ದೇವಸ್ಥಾನ ಆವರಣದಲ್ಲಿ ಪಲ್ಲಕ್ಕಿ ಉತ್ಸವ ಮುಗಿದ ಬಳಿಕ ಅಲ್ಲಮಪ್ರಭುದೇವರ ಕಲ್ಯಾಣ ಮಂಟಪದಲ್ಲಿ ಮುತ್ತೈದೆಯರಿಂದ ಅಲ್ಲಮಪ್ರಭು ನಾಮಕರಣ ಹಾಗೂ ತೊಟ್ಟಿಲು ಕಾರ್ಯಕ್ರಮ ಜರುಗಿತು. ಹಲವು ಸುಮಂಗಲೆಯರು ಜೋಗುಳ ಪದಗಳನ್ನು ಹಾಡಿದರು. ಬಳಿಕ ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಅಲ್ಲಮಪ್ರಭು ನಾಮಕರಣದ ತೊಟ್ಟಿಲು ಕೆಳಗೆ ಕುಳಿತು ಉಡಿ ತುಂಬಿಸಿಕೊಂಡರೆ ಮಕ್ಕಳ ಭಾಗ್ಯ ಆಗುತ್ತದೆ ಎಂಬ ನಂಬಿಕೆಗೆ ಹಲವರು ಸಾಕ್ಷಿಯಾದರು. ಯುಗಾದಿ ಹಬ್ಬದ ನಿಮಿತ್ತ ದೇವಸ್ಥಾನದಲ್ಲಿ ಪ್ರಸಾದ ಸಮಿತಿ ವತಿಯಿಂದ ಅನ್ನಪ್ರಸಾದ ವ್ಯವಸ್ಥೆ ಕಲ್ಪಸಲಾಗಿತ್ತು.



ತೇರದಾಳ ಸಮೀಪದ ತಮದಡ್ಡಿ ಗ್ರಾಮದ ಆರಾಧ್ಯ ದೈವ ಚಂದ್ರಗಿರಿದೇವಿ ಹಾಗೂ ಗಂಗಾಧರೇಶ್ವರ ಶ್ರೀ ಜಾತ್ರಾ ಮಹೋತ್ಸವ ನಿಮಿತ್ತ ಯುಗಾದಿ ಪಾಡ್ಯೆಯಂದು ಸಂಭ್ರಮದಿಂದ ರಥೋತ್ಸವ ಜರುಗಿತು.

# 18 ರಿಂದ ಸಾಮಾನ್ಯ ಪ್ರವೇಶ (ಸಿಇಟಿ) ಪರೀಕ್ಷೆ ವ್ಯವಸ್ಥಿತ, ಸುಗಮ ಪರೀಕ್ಷೆಗೆ ಡಿಸಿ ಜಾನಕಿ ಸೂಚನೆ

**ಬಾಗಲಕೋಟೆ ::** ಇದೇ ಏ.18 ರಿಂದ 19 ರವರೆಗೆ ಜಿಲ್ಲೆಯ 17 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿರುವ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ)ಗಳನ್ನು ಅತ್ಯಂತ ಸುವ್ಯವಸ್ಥಿತವಾಗಿ ಹಾಗೂ ಸುಸೂತ್ರವಾಗಿ ನಡೆಸುವಂತೆ ಜಿಲ್ಲಾಧಿಕಾರಿಗಳಾದ ಜಾನಕಿ ಕೆ.ಎಂ ಪರೀಕ್ಷೆಗೆ ಸಂಬಂಧಿಸಿದ ಅಧಿಕಾ–ರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಜಿಲ್ಲಾಡಳಿತ ಭವನದ ಕೇಸ್ವಾನ್ ಹಾಲ್‌ನಲ್ಲಿ ಗುರುವಾರ ಸಾಮಾನ್ಯ ಪ್ರವೇಶ ಪರೀಕ್ಷೆಯ–2024ರ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತಾನಾಡಿದ ಅವರು, ಪರೀಕ್ಷೆಗಳು ಅಚ್ಚುಕಟ್ಟಾಗಿ ನಡೆಯುವಂತೆ ನೋಡಿಕೊಳ್ಳಬೇಕು. ಪರೀಕ್ಷೆ ಸಂದರ್ಭದಲ್ಲಿ ಪರೀಕ್ಷೆಗೆ ನಿಯೋಜಿಸಿದ ಅಧಿಕಾರಿ ಮತ್ತು ಸಿಬ್ಬಂದಿಗಳು ಹಾಗೂ ನೋಂದಣಿಯಾದ ವಿದ್ಯಾರ್ಥಿಗಳನ್ನು ಹೊರತುಪಡಿಸಿ, ಇತರರಿಗೆ ಪರೀಕ್ಷಾ ಕೊಠಡಿಗಳಿಗೆ ಪ್ರವೇಶ ಇರುವುದಿಲ್ಲ. ಪರೀಕ್ಷೆಯ ಪಾವಿತ್ರ್ಯತೆಯನ್ನು ಕಾಪಾಡಿಕೊಳ್ಳಬೇಕು. ಪರೀಕ್ಷೆ ಸಂದರ್ಭದಲ್ಲಿ ಯಾವುದೇ ಲೋಪ ಆಗಬಾರದು. ನಿಯಮದಂತೆ ಮಾರ್ಗಾಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರು.

ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆಯಾಗದಂತೆ ಮುಂಜಾಗ್ರತೆ ವಹಿಸಬೇಕು. ಅದರಂತೆ, ಪರೀಕ್ಷಾ ಕೇಂದ್ರದ ಉಪ ಮುಖ್ಯ ಅಧೀಕ್ಷಕರು, ಕಸ್ಟೋಡಿಯನ್‌ಗಳು, ವೀಕ್ಷಕರು, ಜಾಗ್ರತ ದಳದ ಸದಸ್ಯರು ಅವಶ್ಯಕ ಪೂರ್ವ ಸಿದ್ಧತೆ ಕೈಗೊಳ್ಳುವಂತೆ ಸೂಚನೆ ನೀಡಿದ ಅವರು, ಪರೀಕ್ಷಾ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, ಯಾವುದೇ ರೀತಿಯ ಲೋಪವಾಗದಂತೆ ಪರೀಕ್ಷೆ ನಡೆಸುವಂತೆ ಸೂಚಿಸಿದರು.

ಜಿಲ್ಲೆಯ ಬಾಗಲಕೋಟೆ ನಗರದ 8, ಜಮಖಂಡಿ 6 ಹಾಗೂ ಮುಧೋಳ 3 ಪರೀಕ್ಷಾ ಕೇಂದ್ರಗಳೂ ಸೇರಿದಂತೆ ಒಟ್ಟು 17 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದ್ದು, 9,175 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಣಿ ಮಾಡಿಕೊಂಡಿದ್ದಾರೆ. ವೀಕ್ಷಕರನ್ನಾಗಿ 17 ಪರೀಕ್ಷಾ ಕೇಂದ್ರಗಳಿಗೆ ಸಂಬಂಧಿಸಿದ



ಅಧಿಕಾರಿಗಳನ್ನು ನಿಯೋಜಿಸಲಾಗಿದೆ.

ನೇಮಿಸಿದ ಅಧಿಕಾರಿಗಳು ತಮಗೆ ನಿಗದಿಪಡಿಸಿದ ಪರೀಕ್ಷಾ ಕೇಂದ್ರಗಳಿಗೆ ನಿಗದಿತ ಸಮಯದಲ್ಲಿ ಹಾಜರಾಗಿ ಪರೀಕ್ಷಾ ಕಾರ್ಯ ಮುಗಿಯುವವರೆಗೂ ಕೇಂದ್ರದಲ್ಲಿದ್ದು, ಪರೀಕ್ಷೆ ಬಗ್ಗೆ ಸಂಕ್ಷಿಪ್ತವಾಗಿ ವರದಿ ನೀಡಬೇಕು. ಪ್ರಶ್ನೆ ಪತ್ರಿಕೆ, ಉತ್ತರ ಪತ್ರಿಕೆ ನಿರ್ವಹಣೆ ಅತ್ಯಂತ ವ್ಯವಸ್ಥಿತವಾಗಿ ಕೈಗೊಳ್ಳುವಂತೆ ಅವರು ಸೂಚನೆ ನೀಡಿದರು. ಉಪ ಮುಖ್ಯ ಅಧೀಕ್ಷಕರನ್ನು ಹೊರತುಪಡಿಸಿ ಇನ್ನುಳಿದ ಪರೀಕ್ಷಾ ಸಿಬ್ಬಂದಿಗಳು ಸಹ ಮೊಬೈಲ್ ಬಳಸುವುದನ್ನು ನಿಷೇಧಿಸಲಾಗಿದೆ.

ಪ್ರಶ್ನೆ ಪತ್ರಿಕಾ ಪಾಲಕರು ಕಡ್ಡಾಯವಾಗಿ ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳ ಸಂಖ್ಯೆ ಹಾಗೂ ಗೈರು ಹಾಜರಾದ ವಿದ್ಯಾರ್ಥಿಗಳ ಸಂಖ್ಯೆ ದಾಖಲಿಸಿಕೊಳ್ಳಬೇಕು. ಯಾವುದೇ ಗೊಂದಲಕ್ಕೊಳಗಾಗದಂತೆ ಕಾರ್ಯನಿರ್ವಹಿಸಿ, ಅತ್ಯಂತ ಜವಾಬ್ದಾ–ರಿಯಿಂದ ಪರೀಕ್ಷಾ ಕಾರ್ಯ ನಿರ್ವಹಿಸುವಂತೆ ಅವರು ಸೂಚಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಪರಶುರಾಮ ಶಿನ್ನಾಳಕರ, ಖಜಾನೆ ಇಲಾಖೆ ಉಪನಿರ್ದೇಶಕ ಕುಂಬಾರ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ರಾಜಶೇಖರ ಪಟ್ಟಣಶೆಟ್ಟಿ, ಪ್ರಶ್ನೆ ಪತ್ರಿಕೆ ವಿತರಣಾ ತಂಡದ ಪ್ರಾಚಾರ್ಯರು ಹಾಗೂ ಉಪನ್ಯಾಸಕರು ಹಾಗೂ ಎಲ್ಲಾ ಪರೀಕ್ಷಾ ಕೇಂದ್ರದ ಉಪ ಅಧೀಕ್ಷಕರು ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

## ದಾನಿಗೊಂಡ ವಾಣಿಜ್ಯ ಮಹಾವಿದ್ಯಾಲ ನೂರಕ್ಕೆ ನೂರರಷ್ಟು ಫಲಿತಾಂಶ



**ತೇರದಾಳ :** ಇಲ್ಲಿನ ಎಸ್‌ಡಿ–ಎಂ ಟ್ರಷ್ಟ್‌ನ ದಾನಿಗೊಂಡ ವಾಣಿಜ್ಯ ಮಹಾವಿದ್ಯಾಲಯದ ದ್ವಿತೀಯ ಪಿಯು ಫಲಿತಾಂಶ 52 ವಿದ್ಯಾರ್ಥಿಗಳು ಉತ್ತೀರ್ಣಗೊಳ್ಳುವ ಮೂಲಕ ನೂರಕ್ಕೆ ನೂರರಷ್ಟು ಆಗಿದೆ.

ಅನುಪ್ರಿಯಾ ಬಾಗಿ 572(95.33) ಅಂಕ ಪಡೆದು ಪ್ರಥಮ ಸ್ಥಾನ ಪಡೆದಿದ್ದಾಳೆ. ಪ್ರಿಯಾಂಕ ಹನಗಂಡಿ 556(92.66) ದ್ವಿತೀಯ ಹಾಗೂ ಸ್ಫೂರ್ತಿ ಮಳವಾಡ 553(92.16) ರಷ್ಟು ಅಂಕ ಪಡೆದು ತೃತೀಯ ಸ್ಥಾನ ಪಡೆದಿದ್ದಾಳೆಂದು ಕಾಲೇಜಿನ ಪ್ರಕಟಣೆ ತಿಳಿಸಿದೆ.

## ದಾನಿಗೊಂಡ ಪಿಯು ವಿಜ್ಞಾನ ಕಾಲೇಜ್ ನೂರಕ್ಕೆ ನೂರರಷ್ಟು ಫಲಿತಾಂಶ



**ತೇರದಾಳ :** ಇಲ್ಲಿನ ದಾನಿಗೊಂಡ ಸಮೂಹ ಶಿಕ್ಷಣ ಸಂಸ್ಥೆಯ ದಾನಿಗೊಂಡ ಪಿಯು ವಿಜ್ಞಾನ ಕಾಲೇಜಿನ ದ್ವಿತೀಯ ಪಿಯು ಫಲಿತಾಂಶ ನೂರಕ್ಕೆ ನೂರರಷ್ಟು ಆಗಿದೆ.


ಶ್ರೀನಿವಾಸ ಮಹಾದಿಕ್ 581(96.83) ರಷ್ಟು ಅಂಕ ಪಡೆದು ಪ್ರಥಮ ಸ್ಥಾನ ಪಡೆದಿದ್ದಾನೆ. ಅದರಂತೆ ಚಂದ್ರಿಕಾ ಮುಕುಂದ 578(96.33) ಅಂಕ ಪಡೆದು ದ್ವಿತೀಯ ಹಾಗೂ ಸಿದ್ಧಾರ್ಥ ಕರಾಲೆ 576(96) ರಷ್ಟು ಅಂಕ ಪಡೆದು ತೃತೀಯ ಸ್ಥಾನ ಪಡೆದಿದ್ದಾನೆ. 136 ವಿದ್ಯಾರ್ಥಿಗಳ ಪೈಕಿ 89 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಪಾಸಾಗಿದ್ದಾರೆ. 43 ಪ್ರಥಮ ಶ್ರೇಣಿಯಲ್ಲಿ ಪಾಸಾಗಿದ್ದಾರೆ. ಗಣಿತಶಾಸ್ತ್ರ ವಿಷಯದಲ್ಲಿ 21 ವಿದ್ಯಾರ್ಥಿಗಳು, ಕನ್ನಡ ವಿಷಯದಲ್ಲಿ 10 ವಿದ್ಯಾರ್ಥಿಗಳು, ಭೌತಶಾಸ್ತ್ರದಲ್ಲಿ 5 ವಿದ್ಯಾರ್ಥಿಗಳು ನೂರಕ್ಕೆ ನೂರು ಅಂಕ ಪಡೆಯುವ ಮೂಲಕ ಕಾಲೇಜಿನ ಕೀರ್ತಿ ಹೆಚ್ಚಿಸಿದ್ದಾರೆ. ಸಾಧನೆಗೈದ ವಿದ್ಯಾರ್ಥಿಗಳನ್ನು ಸಂಸ್ಥೆ ಚೇರಮನ್ ಡಾ. ಮಹಾವೀರ ದಾನಿಗೊಂಡ ಅಭಿನಂದಿಸಿದ್ದಾರೆ.

## ಕಾಂಗ್ರೆಸ್ ಅಭ್ಯರ್ಥಿ ಸಂಯುಕ್ತಾಗೆ ಭರ್ಜರಿ ಸ್ವಾಗತ



**ಮಹಾಲಿಂಗಪುರ :** ಯುಗಾದಿಯಂದು ಮಹಾಲಿಂಗಪುರಕ್ಕೆ ಆಗಮಿಸಿದ ಬಾಗಲಕೋಟೆ ಲೋಕಸಭಾ ಕಾಂಗ್ರೆಸ್ ಅಭ್ಯರ್ಥಿ ಸಂಂ–ಮುಕ್ತಾ ಪಾಟೀಲ ಅವರಿಗೆ ಮಹಾಲಿಂಗಪುರ ಪಟ್ಟಣದಲ್ಲಿ ಯುಥ್ ಕಾಂಗ್ರೆಸ್ ಘಟಕದಿಂದ ಕ್ರೇನ್ ಮೂಲಕ ಬೃಹತ್ ಹೂವಿನ ಹಾರ ಹಾಕಿ, ಹೂಮಳೆ ಸುರಿಸಿ ಭರ್ಜರಿಯಾಗಿ ಸ್ವಾಗತಿಸಿದರು. ಯೂಥ್ ಕಾಂಗ್ರೆಸ್ ರಾಜ್ಯ ಪ್ರದಾನ ಕಾರ್ಯದರ್ಶಿ ಸೂರಜ ಅವಟಿ ಹಾಗೂ ಸುನೀಲ ಬನಹಟ್ಟಿ, ನಾಗೇಶ ನೇಸೂರ, ಸಂಗಯ್ಯ ಪೂಜಾರಿ, ಜಬಿವುಲ್ಲಾ ಮುಲ್ಲಾ ಸೇರಿದಂತೆ ಹಲವರು ಇದ್ದರು.

## ತೇರದಾಳ ಜೆವಿ ಮಂಡಳ ವಾಣಿಜ್ಯ ಕಾಲೇಜ್



**ತೇರದಾಳ :** ಇಲ್ಲಿನ ಜೆವಿ ಮಂಡಳ ಸ್ವತಂತ್ರ ಪದವಿ ಪೂರ್ವ ಮಹಾವಿದ್ಯಾಲದ ದ್ವಿತೀಯ ಪಿಯು ವಾಣಿಜ್ಯ ವಿಭಾಗದ ಫಲಿತಾಂಶ ಉತ್ತಮವಾಗಿದೆ. ಪರೀಕ್ಷೆಗೆ ಹಾಜರಾಗಿದ್ದ 48 ವಿದ್ಯಾರ್ಥಿಗಳ ಪೈಕಿ 47 ವಿದ್ಯಾರ್ಥಿಗಳು ಪಾಸಾಗಿದ್ದು, ಕಾಲೇಜಿನ ಫಲಿತಾಂಶ ಶೇ. 98ರಷ್ಟು ಆಗಿದೆ. ಅಕ್ಷತಾ ಸಾರಾಪುರ (589(98.16)ರಷ್ಟು ಅಂಕ ಪಡೆದು ಪ್ರಥಮ ಸ್ಥಾನ ಪಡೆದಿದ್ದಾಳೆ. ಅದರಂತೆ ಮಂಗಳಾ ಪಟಾಣಿ 588(98%) ದ್ವಿತೀಯ, ತೇಜಸ್ವಿನಿ ಕಡಕೋಳ 585(97.50) ತೃತೀಯ, ಪೂಜಾ ಚನಾಳ 580(96.66) ರಷ್ಟು ಅಂಕ ಪಡೆದು ನಾಲ್ಕನೇ ಸ್ಥಾನ ಪಡೆದುಕೊಂಡಿದ್ದಾರೆ. ಶಿಲ್ಪಾ ಬಡಿಗೇರ, ಸ್ವಾತಿ ಹಳ್ಳೂರ ಹಾಗೂ ಅಮೃತಾ ಸಾವಂತನವರ ಶೇಕಡಾ 95ಕ್ಕೂ ಅಧಿಕ ಅಂಕ ಪಡೆದುಕೊಂಡಿದ್ದಾರೆಂದು ಪ್ರಾಚಾರ್ಯ ಸಂತೋಷ ಕುಳ್ಳಿ ತಿಳಿಸಿದ್ದಾರೆ.

## ಎಸ್‌ಡಿಪಿಐಆಯ್ ಮುಖಂಡರು ಕಾಂಗ್ರೆಸ್ ಸೇರ್ಪಡೆ



**ಮಹಾಲಿಂಗಪುರ :** ಬಾಗಲಕೋಟೆ ಲೋಕಸಭಾ ಕಾಂಗ್ರೆಸ್ ಅಭ್ಯರ್ಥಿ ಶ್ರೀಮತಿ ಸಂಯುಕ್ತಾ ಪಾಟೀಲ ಅವರ ನೇತೃತ್ವದಲ್ಲಿ ತೇರದಾಳ ಮತಕ್ಷೇತ್ರದ ಎಸ್‌ಡಿಪಿಐಆಯ್ ಪಕ್ಷದ ಮುಖಂಡರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು.

ಯುಗಾದಿಯ ದಿನ ತೇರದಾಳ ಮತಕ್ಷೇತ್ರದ ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ ನಿವಾಸದಲ್ಲಿ ಜರುಗಿದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ತೇರದಾಳ ಮತಕ್ಷೇತ್ರದ ಎಸ್‌ಡಿಪಿಆಯ್ ಮುಖಂಡರಾದ ಪರಶುರಾಮ ಮೇತ್ರಿ, ಶೇಖರ ಮಾಂಗ, ಹುಸೇನ ಉಕ್ಕಲಿ, ಶಾನೂರ ಕುಳ್ಳೋಳ್ಳಿ, ಅಬ್ಬಾಸಲಿ ಖರೋಶಿ, ಆದಮ ಅತ್ತಾರ, ಮಹೇಶ ಕಾಳಾ, ಬಾಬು ಮಾಂಗ ಸೇರಿದಂತೆ ಹಲವರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು.

ಅಭ್ಯರ್ಥಿ ಸಂಯುಕ್ತಾ ಪಾಟೀಲ ಮಾತನಾಡಿ ಬಾಗಲಕೋಟೆ ಲೋಕಸಭಾ ಕ್ಷೇತ್ರದಾದ್ಯಂತ ಅಭೂತಪೂರ್ವ ಬೆಂಬಲ ದೊರೆಯುತ್ತಿದೆ. ಪಕ್ಷದ ಮುಖಂಡರು, ಕಾರ್ಯಕರ್ತರು, ಅಭಿಮಾನಿಗಳು ಒಗ್ಗಟ್ಟಾಗಿ ಕೆಲಸ ಮಾಡಿರಿ. ನಿಮ್ಮ ಮನೆ ಮಗಳಾಗಿ ನಿಮ್ಮ ಸೇವೆ ಮಾಡುತ್ತೇನೆ ಎಂದರು.

ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ, ಸೇರ್ಪಡೆಯಾದ ಪರಶುರಾಮ ಮೇತ್ರಿ, ವಿಠ್ಠಲ ಸಂಶಿ ಸಂಯುಕ್ತಾ ಪಾಟೀಲ ಅವರ ಗೆಲುವಿಗಾಗಿ ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡೋಣ ಎಂದರು.

ಕಾಂಗ್ರೆಸ್ ಮುಖಂಡರಾದ ಯಲ್ಲನಗೌಡ ಪಾಟೀಲ, ಮಲ್ಲಪ್ಪ ಸಿಂಗಾಡಿ, ಬಸವರಾಜ ರಾಯರ, ಬಲವಂತಗೌಡ ಪಾಟೀಲ, ನಾರಾಯಣ ಜೋಶಿ, ಬಸವರಾಜ ಕರೆಹೊನ್ನ, ವಿನೋದ ಸಿಂಪಿ, ರಾಜು ಬಗನಾಳ, ಸುನೀಲಗೌಡ ಪಾಟೀಲ, ಆನಂದ ಬಂಡಿ, ನಜೀರ ಜಾರೆ, ಅರವಿಂದ ಮಾಲಬಸರಿ, ವಿಠ್ಠಲ ಕುಳಲಿ, ಸಿರಾಜ ಪಾಂಡು, ಮಹಾಲಿಂಗ ಪಾಟೀಲ, ಶೆಟ್ಟೆಪ್ಪ ಕೆಳಗಡೆ, ಶ್ರೀಶೈಲ ದೊಡಮನಿ, ಮಹಾಲಿಂಗ ಮಾಳಿ, ಅಶೋಕ ಅಂಗಡಿ, ಲಕ್ಕಪ್ಪ ಭಜಂತ್ರಿ, ಮಹಿಳಾ ಮುಖಂಡರಾದ ಜಯಶ್ರೀ ತಿಮ್ಮಾಪೂರ, ವಿದ್ಯಾ ಬಿಳ್ಳೂರ, ಮಹಾನಂದಾ ಅಮರಾಪೂರ, ಬಸವರಾಜ ಮಾವಿನಹಿಂಡಿ ಸೇರಿದಂತೆ ಹಲವರು ಇದ್ದರು.

## ಮೊಬೈಲ್ ರಿಪೇರಿ ತರಬೇತಿಗೆ ಅರ್ಜಿ

**ಬಾಗಲಕೋಟೆ :** ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದ ಕೆನರಾ ಬ್ಯಾಂಕ್ ದೇಶಪಾಂಡೆ ಆರ್‌ಸೆಟಿ ತರಬೇತಿ ಸಂಸ್ಥೆಯಲ್ಲಿ 18 ರಿಂದ 45 ವರ್ಷದ ಗ್ರಾಮೀಣ ಭಾಗದ ನಿರುದ್ಯೋಗಿ ಯುವಕ, ಯುವತಿಯ–ರಿಗಾಗಿ ಮೇ ತಿಂಗಳಲ್ಲಿ 30 ದಿನಗಳ ಮೊಬೈಲ್ ರಿಪೇರಿ ತರಬೇತಿ ನೀಡುವ ಸಲುವಾಗಿ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಎಪ್ರೀಲ್ 20 ರೊಳಗಾಗಿ ದೂಸಂ.9980510717, 9483485489ಗೆ ಕರೆ ಮಾಡಿ ಹೆಸರನ್ನು ನೊಂದಾಯಿಸಿಕೊಳ್ಳಬಹುದಾಗಿದೆ ಎಂದು ಕೆನರಾ ಬ್ಯಾಂಕ್ ಆರ್‌ಸೆಟ್ ಸಂಸ್ಥೆಯ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ತೇರದಾಳ ಜೆವಿ ಮಂಡಳ ಕಲಾ ವಿಭಾಗ



**ತೇರದಾಳ :** ಇಲ್ಲಿನ ಜೆವಿ ಮಂಡಳ ಸ್ವತಂತ್ರ ಪದವಿ ಪೂರ್ವ ಮಹಾವಿದ್ಯಾಲದ ದ್ವಿತೀಯ ಪಿಯು ಕಲಾ ವಿಭಾಗದ ಫಲಿತಾಂಶ ಉತ್ತಮವಾಗಿದೆ. ಪರೀಕ್ಷೆಗೆ ಹಾಜರಾಗಿದ್ದ 77 ವಿದ್ಯಾರ್ಥಿಗಳ ಪೈಕಿ 76 ವಿದ್ಯಾರ್ಥಿಗಳು ಪಾಸಾಗಿದ್ದು,

ಕಾಲೇಜಿನ ಫಲಿತಾಂಶ ಶೇ. 99ರಷ್ಟು ಆಗಿದೆ. ಐಶ್ವರ್ಯಾ ಕೌಜಲಗಿ (586(97.66)ರಷ್ಟು ಅಂಕ ಪಡೆದು ಪ್ರಥಮ ಸ್ಥಾನ ಪಡೆದಿದ್ದಾಳೆ. ಅದರಂತೆ ಅಕ್ಷತಾ ದೇಸ್ತೋಟ 578(96.33) ದ್ವಿತೀಯ, ಶೃತಿ ಹಾಲೊಳ್ಳಿ ಹಾಗೂ ತೇಜಸ್ವಿನಿ ಅಥಣಿ 573(96.66) ರಷ್ಟು ಅಂಕ ಪಡೆದು ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ. ಕನ್ನಡ ವಿಷಯದಲ್ಲಿ 15, ಅರ್ಥಶಾಸ್ತ್ರದಲ್ಲಿ 10 ಇತಿಹಾಸದಲ್ಲಿ 3 ವಿದ್ಯಾರ್ಥಿಗಳು ನೂರಕ್ಕೆ ನೂರು ಅಂಕಗಳನ್ನು ಪಡೆದುಕೊಂಡಿದ್ದಾರೆಂದು ಪ್ರಾಚಾರ್ಯ ಸಂತೋಷ ಕುಳ್ಳಿ ತಿಳಿಸಿದ್ದಾರೆ.

# ಯುಗಾದಿಯ ಮಹಾಲಿಂಗೇಶ್ವರ ಜಟೋತ್ಸವಕ್ಕೆ ಭಕ್ತ ಜನಸಾಗರ

**ಮಹಾಲಿಂಗಪುರ :** ಹಿಂದೂಗಳ ಪವಿತ್ರ ಹಬ್ಬ, ವರ್ಷದ ಆರಂಭ ದಿನವಾದ ಯುಗಾದಿಯ ದಿನ ನಸುಕಿನ ಜಾವ ನಡೆಯುವ ಜಟೋತ್ಸವ ವೀಕ್ಷಣೆಗಾಗಿ ಮಂಗಳವಾರ ಪಟ್ಟಣದ ಐತಿಹಾಸಿಕ ಮಹಾಲಿಂಗೇಶ್ವರ ದೇವಸ್ಥಾನಕ್ಕೆ ಭಕ್ತ ಜನಸಾಗರವೇ ಹರಿದು ಬಂದಿತ್ತು.

ಜಟೋತ್ಸವ ವೀಕ್ಷಣೆಯೇ ಪುಣ್ಯ :

ಬೆಳೆಯುವ ಜಟೆಗಳ ಒಡೆಯ ಎಂದೇ ಖ್ಯಾತಿಪಡೆದ ಮಹಾಲಿಂಗೇಶ್ವರರ ಜಟೆಗಳು ವಿಜ್ಞಾನಕ್ಕೆ ಸವಾಲು ಎಂಬಂತೆ ಪ್ರತಿವರ್ಷ ಒಂದು ಗೋಧಿಕಾಳಿನಷ್ಟು ಬೆಳೆಯುತ್ತಿವೆ. ಇಂತಹ ಪವಾಡ ಸದೃಶ್ಯ ಜಟೆಗಳನ್ನು ನೋಡುವದೇ ಭಕ್ತರ ಸೌಭಾಗ್ಯ. ಇಂತಹ ವೈಶಿಷ್ಟ್ಯಪೂರ್ಣ ಜಟೆಗಳ ಅಭಿಷೇಕ (ಜಟೋತ್ಸವ)ದ ವಿಶೇಷವಾಗಿದೆ. ಯುಗಾದಿಯ ಪಾಡ್ಯೆ, ಹಿಂದೂಗಳ ವರ್ಷದ ಪ್ರಥಮ ದಿನ ನಡೆಯುವ ಜಟೋತ್ಸವ ವೀಕ್ಷಣೆ




ಮಾಡುವದೇ ಪುಣ್ಯ ಎಂದು ಭಾವಿಸಿರುವ ಸಾವಿರಾರು ಭಕ್ತರು ಪ್ರತಿವರ್ಷ ಯುಗಾದಿ ಪಾಡ್ಯೆ ಮುಂಜಾನೆ ನಡೆಯುವ ಜಟೋತ್ಸವಕ್ಕೆ ನಸುಕಿನ ಜಾವದಿಂದಲೇ ಮಹಾಲಿಂಗೇಶ್ವರ ದೇವಸ್ಥಾನಕ್ಕೆ ಆಗಮಿಸಿ ಮಹಾಲಿಂಗೇಶ್ವರರಿಗೆ ಪೂಜೆ ಸಲ್ಲಿಸಿ, ಜಟೋತ್ಸವ ವೀಕ್ಷಿಸಿ ಪುನೀತರಾಗುತ್ತಾರೆ.

ಶ್ರೀಮಠದ ಪೀಠಾಧಿಪತಿ ಜಗದ್ಗುರು ಮಹಾಲಿಂಗೇಶ್ವರ ಶಿವಯೋಗಿ ರಾಜೇಂದ್ರ ಸ್ವಾಮಿಜಿ ಅವರು ಜಟೋತ್ಸವ ನೇರವೇರಿಸಿದರು. ಜಟೋತ್ಸವ ವೇಳೆ ಕರಡಿ ಕಲಾವಿದರು ಕರಡಿ ಸೇವೆಯನ್ನು ಸಲ್ಲಿಸಿದರು. ಮಹಾಲಿಂಗೇಶ್ವರ ಗದ್ದುಗೆಗೆ ವಿಶೇಷ ಅಲಂಕಾರ ಮಾಡಿ ಪೂಜಿಸಲಾಗಿತ್ತು. ಪಲ್ಲಕ್ಕಿ, ನಂದಿಕೋಲು ಉತ್ಸವದೊಂದಿಗೆ ಶ್ರೀಗಳು ಮಹಾಲಿಂಗೇಶ್ವರ ದೇವಸ್ಥಾನದಿಂದ ಚನ್ನಗಿರಿ ಪರ್ವತದ ರಾಮಲಿಂಗೇಶ್ವರ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿದರು.

ಮಹಾಲಿಂಗಪುರ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸಾವಿರಾರು ಜನರು ಜಟೋತ್ಸವ ವೀಕ್ಷಿಸಿದರು. ಜಟೋತ್ಸವಕ್ಕೆ ಆಗಮಿಸಿದ ಭಕ್ತರಿಗೆ ಶ್ರೀಮಠದಿಂದ ಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿತ್ತು. ಪುರದ ಹಿರಿಯರಾದ ಯಲ್ಲನಗೌಡ ಪಾಟೀಲ, ಜಾತ್ರಾ ಕಮಿಟಿ ಅಧ್ಯಕ್ಷ ರವಿಗೌಡ ಪಾಟೀಲ, ಶ್ರೀಮಠದ ಸದ್ಭಕ್ತರಾದ ಕೃಷ್ಣಗೌಡ ಪಾಟೀಲ, ಈಶ್ವರ ಮಠದ, ಸಂತೋಷ ಶಿರೋಳ, ಸುಭಾಸ ವಜ್ಜರಮಟ್ಟಿ, ಸಂಜು ಅಂಗಡಿ, ಶ್ರೀಶ ಬುದ್ನಿ, ಶ್ರೀಧರ ಗಿಂಡೆ, ಬಸವರಾಜ ಮೇಟಿ ಸೇರಿದಂತೆ ಹಲವರು ಇದ್ದರು.

## ಸೈಕಲ್ ಮೇಲೆ ಶ್ರೀಶೈಲಂ ಯಾತ್ರೆ ಮಾಡಿದ ಭೂಪರು



**ಮಹಾಲಿಂಗಪುರ :** ಸಮೀಪದ ಬಿಸನಾಳ ಗ್ರಾಮದ ಉಳೆಪ್ಪ ಶಿವಲಿಂಗಪ್ಪ ಚನ್ನಾಳ, ಹನಮಂತ ಶಂಕರೆಪ್ಪ ಚನ್ನಾಳ, ದುಂಡಪ್ಪ ಶಂಕರೆಪ್ಪ ಮೂಡಲಗಿ ಅವರು ಸೈಕಲ್ ತುಳಿಯುತ್ತ ಶ್ರೀಶೈಲಂ ಕ್ಷೇತ್ರದ ಶ್ರೀಮಲ್ಲಿಕಾರ್ಜುನ ದರ್ಶನ ಪಡೆದು ಮರಳಿ ಊರಿಗೆ ಆಗಮಿಸಿದರು.

ಯಾತ್ರಿಕರನ್ನು ಜಿಪಂ ಮಾಜಿ ಅಧ್ಯಕ್ಷ ಮಹಾಂತೇಶ ಹಿಟ್ಟಿನಮಠ ಅವರು ಮಹಾಲಿಂಗಪುರದ ಪ್ರವೇಶ ದ್ವಾರದ ಬಳಿ ಬರಮಾಡಿಕೊಂಡು ಸ್ವಾಗತಿಸಿ ಅಭಿನಂದಿಸಿದರು. ಸೋಮು ವಾಲಿ, ಪ್ರಕಾಶ ಚನ್ನಾಳ, ದುಂಡಪ್ಪ ಚನ್ನಾಳ, ಚಂದು ನಾಯಿಕ, ಮಹಾಲಿಂಗಪ್ಪ ಉಳ್ಳಾಗಡ್ಡಿ, ರಾಜು ಬೆಳಗಾಂವಕರ, ಚನ್ನಪ್ಪ ಕಲಾಗತಿ, ಸಾಗರ ಬುರುಡ ಇದ್ದರು.

ಸೈಕಲ್ ಪಾದಯಾತ್ರಿ ಉಳೆಪ್ಪ ಚನ್ನಾಳ 66ನೇ ವಯಸ್ಸಿನಲ್ಲೂ ಉತ್ಸಾಹದಿಂದ 4ನೇ ಬಾರಿ ಸೈಕಲ್ ತುಳಿಯುತ್ತ ಶ್ರೀಶೈಲ ಪಾದಯಾತ್ರೆ ಮಾಡಿದ್ದಾರೆ. ಪ್ರತಿ ವರ್ಷ ಹೊಸಬರನ್ನು ಹುರುಪಿನಿಂದ ಸೈಕಲ್ ಸವಾರಿಯೊಂದಿಗೆ ಶ್ರೀಶೈಲ ದರ್ಶನ ಮಾಡಿಸುತ್ತಾರೆ. ಬಿಸನಾಳ ಗ್ರಾಮದಿಂದ ಶ್ರೀಶೈಲಂ 650 ಕಿಮೀ ದೂರವಿದೆ. ಕೇವಲ 4 ದಿನದಲ್ಲಿ ಶ್ರೀಶೈಲ ತಲುಪಿ, ಒಂದು ದಿನ ವಾಸ್ತವ್ಯ ಮಾಡಿ ಮತ್ತೆ 4 ದಿನದಲ್ಲಿ ಊರಿಗೆ ಮರಳಿದ್ದಾರೆ. ಈ ಮಧ್ಯೆ ವಿಪರೀತ ಬಿಸಿಲ ಬೇಗೆಯಲ್ಲಿ ಬೆಂದಿದ್ದಾರೆ. ಭಕ್ತಿಯ ಪರಾಕಾಷ್ಠೆಯಲ್ಲಿ ಎಲ್ಲವನ್ನೂ ಸಹಿಸಿ ಸಂತುಷ್ಟರಾಗಿದ್ದಾರೆ. ಇವರ ಸಾಧನೆಗೆ ಹುಟ್ಟೂರಲ್ಲಿ ಸನ್ಮಾನಗಳ ಸುರಿಮಳೆಯಾಗುತ್ತಿದೆ.

# ಕೌಜಲಗಿಯಲ್ಲಿ ಸಂಭ್ರಮದಿಂದ ಜರುಗಿದ ಬಸವೇಶ್ವರ ರಥೋತ್ಸವ



**ಮೂಡಲಗಿ :** ಹೊಸ ಮಧುವನಗಿತ್ತಿಯಂತೆ ಶೃಂಗಾರಗೊಂಡ ಕೌಜಲಗಿಯ ಬಸವೇಶ್ವರ ರಥೋತ್ಸವ ಮಂಗಳವಾರ ಅತ್ಯಂತ ಸಡಗರ ಸಂಭ್ರಮದಿಂದ ಜರುಗಿತು.

ಪೇಟೆಯ ಬಸವೇಶ್ವರ ದೇವಸ್ಥಾನದಿಂದ ಪೂರ್ವ ದಿಕ್ಕಿನ ಬಸವಣ್ಣನ ಪಾದುಗಟ್ಟೆಯವರಿಗೆ ಜರುಗಿದ ರಥೋತ್ಸವದಲ್ಲಿ ಸಾವಿರಾರು ಜನ ಹರ ಹರ ಮಹಾದೇವ ಎಂಬ ಹರ್ಷೋದ್ಗಾರವನ್ನು ಮೊಳಗಿಸುತ್ತ, ತೆರಿಗೆ ಬೆಂಡು-ಬೆತ್ತಾಸ, ಉತ್ತತ್ತಿ-ಬಾಳೆಹಣ್ಣು ಎಸೆದು ತಮ್ಮ ಭಕ್ತಿ ಸಮರ್ಪಿಸಿದರು. ಸಾಂಪ್ರದಾಯಿಕ ಸೇವಕರಾದ ರಥ ನಿರ್ಮಾಣದ ವಿಶ್ವಕರ್ಮರು, ಬಸವಣ್ಣನ ಉತ್ಸವ ಮೂರ್ತಿಗೆ ಚಾಮರ ಬೀಸುವ ಲೋಕನ್ನವರ್, ರಥ ಚಾಮರರಾದ ಭೋವಿಗಳು, ರಥಚಕ್ರ ಸೇವಕರಾದ ವಡ್ಡರು, ಸಿಂಪಿಗರು, ನಂದಿಕೋಲಿನ ಸೇವಕರಾದ ಬಿಸಗುಪ್ಪಿ ಮನೆತನದವರು ದೀಪ ಪ್ರಜ್ವಲಿಸುವ ಯಡವನ್ನವರ ಮನೆತನದವರು, ಮಂಗಳವಾದ್ಯಗಳ ಹಲಗೆಕಾರರು, ಕರಡಿ ಮಜಲಿನವರು ಮುಂತಾದವರು ರಥ ಸೇವೆ ಸಲ್ಲಿಸಿದರು. ಯುವಕರು ಡಿಜೆ ಸಂಗೀತದ ಮೂಲಕ ಕಣಿದು ಕುಪ್ಪಳಿಸಿದರು. ಮಕ್ಕಳು, ಮಹಿಳೆಯರು ಹಿರಿಯರು ಕೌಜಲಗಿ ಪಟ್ಟಣದ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಜಾತ್ರೆಯಲ್ಲಿ ಪಾಲ್ಗೊಂಡು ಸಂಭ್ರಮಿಸಿದರು.

ಪಟ್ಟಣದ ಶ್ರೀಕಾಂತ ವಿರಕ್ತಮಠ, ನೀಲಕಂಠಯ್ಯ ಹಿರೇಮಠ, ಕೆಂಪಯ್ಯ ಸತ್ತಿಗೇರಿಮಠ ಅವರ ನೇತ್ರತ್ವದಲ್ಲಿ, ರವಿ ಪರುಶೆಟ್ಟಿ, ಶಿವಾನಂದ ಲೋಕನ್ನವರ, ಬಸವರಾಜ ಲೋಕನ್ನವರ, ಇರಪಣ್ಣ ಬಿಸಗುಪ್ಪಿ, ಅಶೋಕ ಶಿವಾಪುರ, ಅಶೋಕ ಪಾಟೀಲ, ಅಶೋಕ ಹೊಸಮನಿ ಮೊದಲಾದವರ ಮಾರ್ಗದರ್ಶನದಲ್ಲಿ ಕಳೆದ ವರ್ಷ ನೂತನವಾಗಿ ನಿರ್ಮಿಸಲಾದ ಕಬ್ಬಿಣದ 3 ಟನ್ ಭಾರದ 21 ಅಡಿ ಎತ್ತರದ ಬಸವೇಶ್ವರ ರಥೋತ್ಸವ ಸಕಲ ವಾದ್ಯ ಘೋಷಗಳೊಂದಿಗೆ ಪರಂಪರಾಗತ ಕರ ಸೇವಕರೊಂದಿಗೆ ಅದ್ದೂರಿಯಾಗಿ ನಡೆಯಿತು.

# ಮತದಾನದ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಸಕಾರಾತ್ಮಕ ಸ್ಪಂದನೆ

**ಬಾಗಲಕೋಟೆ::** ಚುನಾವಣಾ ಮತದಾನದಿಂದ ದೂರ ಉಳಿಯಲು ಮುಂದಾಗಿದ್ದ ಮಹಾಲಿಂಗಪೂರದ ಹೋರಾಟಗಾರರು ಚುನಾವಣೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ಸಕಾರಾತ್ಮಕವಾಗಿ ಸ್ಪಂದನೆ ನೀಡಿದ್ದಾರೆಂದು ಜಿಲ್ಲಾಧಿಕಾರಿ ಆಗಿರುವ ಜಿಲ್ಲಾ ಚುನಾವಣಾಧಿಕಾರಿ ಜಾನಕಿ ಕೆ.ಎಂ ತಿಳಿಸಿದ್ದಾರೆ.

ಬುಧವಾರ ಮಹಾಲಿಂಗಪೂರದ ಜನತೆಯೊಂದಿಗೆ ಪರಸ್ಪದ ಮಾತುಕತೆಯ ನಡೆಸುವ ಮೂಲಕ ಅವರ ಮನ ಒಲಿಸುವಲ್ಲಿ ಯಶಸ್ವಿಯಾದರು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾನ ಪ್ರತಿಯೊಬ್ಬರ ಹಕ್ಕಾಗಿದ್ದು, ಅದನ್ನು ಚಲಾಯಿಸುವ ಮೂಲಕ ಪ್ರಜಾಪ್ರಭುತ್ವ ಗಟ್ಟಿಗೊಳಿಸುವಂತೆ ಮನವಿ ಮಾಡಿಕೊಂಡರು. ಈ ಸಮಯದಲ್ಲಿ ಜಿ.ಪಂ ಸಿಇಓ ಶಶಿಧರ ಕುರೇರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಮರನಾಥ ರೆಡ್ಡಿ, ರಬಕವಿ-ಬನಹಟ್ಟಿ ತಹಶೀಲ್ದಾರ ಗಿರೀಶ ಸ್ವಾದಿ ಇದ್ದರು.

# ಗೆಲುವಿಗಾಗಿ ದೇವರ ಮೊರೆ ಹೋದ ಪ್ರತಿಸ್ಪರ್ಧಿಗಳು ಪವಾಡ ಪುರುಷ ಮಹಾಲಿಂಗೇಶ್ವರ ಕೃಪೆ ಯಾರ ಮೇಲೆ!

ಚಂದ್ರಶೇಖರ ಮೋರೆ

**ಮಹಾಲಿಂಗಪುರ :** ಸ್ಥಳಿಯ ಆರಾಧ್ಯ ದೈವ, ಪವಾಡ ಪುರುಷ ಮಹಾಲಿಂಗೇಶ್ವರರು ಭಕ್ತ ಕಾಮಧೇನು, ಕಲ್ಪವೃಕ್ಷವಾಗಿದ್ದು. ಪ್ರತಿವರ್ಷ ಯುಗಾದಿ ಮುಂಜಾನೆ ಜರಗುವ ಜಟೋತ್ಸವ ದರ್ಶನ ಮಾಡಿಕೊಂಡವರಿಗೆ ಅವರ ಇಷ್ಟಾರ್ಥ ಮತ್ತು ಸಂಕಲ್ಪಗಳು ಸಿದ್ಧಿಯಾಗುತ್ತವೆ ಎಂಬುದು ಇಲ್ಲಿಯ ಭಕ್ತರ ಅಚಲ ನಂಬಿಕೆಯಾಗಿದೆ.

ಹಿಂದುಗಳ ವರ್ಷಾರಂಭದ ಮೊದಲ ದಿನವಾದ ಯುಗಾದಿಯ ಮುಂಜಾನೆ ಪ್ರತಿವರ್ಷ ಸಾವಿರಾರು ಭಕ್ತರು ನಸುಕಿನ ನಾಲ್ಕು ಘಂಟೆಗೆ ದೇವಸ್ಥಾನದಲ್ಲಿ ಜಮಾಯಿಸಿ ಜಟೋತ್ಸವ ವಿಕ್ಷಿಸಿ ಪುನೀತರಾಗುತ್ತಾರೆ. ಅದರಂತೆ ಈ ವರ್ಷದ ಯುಗಾದಿ ಪಾಡ್ಯೆಯ ಮಂಗಳವಾರ ನಸುಕಿನ ಜಾವ ಲೋಕಸಭೆ ಚುನಾವಣೆಯ ಬಾಗಲಕೋಟ ಮತಕ್ಷೇತ್ರದ ಅಭ್ಯರ್ಥಿಗಳಾದ ಪಿ. ಸಿ. ಗದ್ದಿಗೌಡರ (ಬಿಜೆಪಿ) ಶ್ರೀಮತಿ ಸಂಯುಕ್ತಾ ಶಿವಾನಂದ ಪಾಟೀಲ(ಕಾಂಗ್ರೆಸ್) ಅವರು ಮಹಾಲಿಂಗೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ, ಭಕ್ತರ ಆರಾಧ್ಯ ದೈವ ಮತ್ತು ವಿಜ್ಞಾನಕ್ಕೆ ಸವಾಲಾಗಿ ಪ್ರತಿವರ್ಷ ಬೆಳೆಯುತ್ತಿರುವ ಮಹಾಲಿಂಗೇಶ್ವರ ಜಟಗಳ ದರ್ಶನ ಪಡೆದು ತಮ್ಮ ತಮ್ಮ ಗೆಲುವಿಗಾಗಿ ಮಹಾಲಿಂಗೇಶ್ವರ ದರ್ಶನ ಮತ್ತು ಪೀಠಾಧಿಪತಿ ಶಿವಯೋಗಿ ರಾಜೇಂದ್ರ ಶ್ರೀಗಳಿಂದ ಆಶೀರ್ವಾದ ಪಡೆದಿದ್ದು ಜಿಲ್ಲೆಯ ರಾಜಕೀಯ ವಲಯದಲ್ಲಿ ಭಾರಿ ಕುತೂಹಲ ಮೂಡಿಸಿದೆ.



**ಪ್ರತಿವರ್ಷ ಭೇಟಿ ನೀಡುವ ಗದ್ದಿಗೌಡರ :** ಕಳೆದ 15 ವರ್ಷಗಳಿಂದ ಪ್ರತಿ ವರ್ಷ ಯುಗಾದಿಯಂದು ಬದಾಮಿಯಿಂದ ಮಹಾಲಿಂಗಪುರದ ಮಹಾಲಿಂಗೇಶ್ವರ ಜಟೋತ್ಸವಕ್ಕೆ ತಪ್ಪದೆ ಆಗಮಿಸುತ್ತಿರುವ ಪಿ. ಸಿ. ಗದ್ದಿಗೌಡರ ಪತ್ರಿಕೆಯೊಂದಿಗೆ ಮಾತನಾಡಿ ಹಿಂದಿನ ಮೂರು ಚುನಾವಣೆಯಲ್ಲಿ ಸ್ಪರ್ಧಿಸಿದ್ದ ವೇಳೆ ಮಹಾಲಿಂಗೇಶ್ವರ ದರ್ಶನ ಪಡೆದು ಗೆಲವು ಸಾಧಿಸಿದ್ದೇನೆ. ಅದೇ ರೀತಿಯಲ್ಲಿ ಪ್ರತಿ ವರ್ಷ ಯುಗಾದಿಯಂದು ಶ್ರೀಮಠಕ್ಕೆ ಭೇಟಿ ನೀಡಿ ನನ್ನ ಕ್ಷೇತ್ರದ ಜನತೆ ಸುಖ-ಶಾಂತಿ-ನೆಮ್ಮದಿಯಿಂದ ಬಾಳಲಿ ಎಂದು ಪ್ರಾರ್ಥಿಸುತ್ತಿದ್ದೇನೆ. ಅದರಂತೆ ಈ ಬಾರಿಯ ಜಟೋತ್ಸವದಲ್ಲಿಯೂ ಭಾಗಿಯಾಗಿದ್ದೇನೆ. ಜಗದ್ಗುರು ಮಹಾಲಿಂಗೇಶ್ವರರ ಆಶಿರ್ವಾದ ಹಾಗೂ ಜಿಲ್ಲೆಯ ಜನತೆಯ ಬೆಂಬಲದಿಂದ 5ನೇ ಭಾರಿಯು ಗೆಲ್ಲುತ್ತೇನೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

**ಪ್ರಥಮ ಬಾರಿಗೆ ಸಂಯುಕ್ತಾ ಭೇಟಿ :** ಇದೇ ಪ್ರಥಮ ಬಾರಿಗೆ ಯುಗಾದಿಯಂದು ಮಹಾಲಿಂಗೇಶ್ವರ ಮಠಕ್ಕೆ ಭೇಟಿ ನೀಡಿ ಜಟೋತ್ಸವ ದರ್ಶನ ಪಡೆದ ಬಾಗಲಕೋಟೆ ಲೋಕಸಭಾ ಕಾಂಗ್ರೆಸ್ ಅಭ್ಯರ್ಥಿ ಶ್ರೀಮತಿ ಸಂಯುಕ್ತಾ ಪಾಟೀಲ ಪತ್ರಿಕೆಯೊಂದಿಗೆ ಮಹಾಲಿಂಗೇಶ್ವರರ ಪವಾಡವು ಅದ್ಭುತವಾಗಿದೆ.

ಯುಗಾದಿ ಪಾಡ್ಯೆಯ ಶುಭದಿನದಂದು ಮಹಾಲಿಂಗೇಶ್ವರರ ಮತ್ತು ಜಟಗಳ ದರ್ಶನ ಪಡೆದುಕೊಂಡಿದ್ದೇನೆ. ಮಹಾಲಿಂಗೇಶ್ವರರ ಕೃಪೆ ಹಾಗೂ ಜಿಲ್ಲೆಯ ಮತದಾರ ಬೆಂಬಲದಿಂದ 20 ವರ್ಷಗಳ ನಂತರ ಕಾಂಗ್ರೆಸ್ ಪಕ್ಷಕ್ಕೆ ಗೆಲುವು ದೊರೆಯಲಿದೆ ಎಂದರು.

**ಪವಾಡ ಪುರುಷನ ಕೃಪೆ ಯಾರ ಮೇಲೆ ? :** ಯುಗಾದಿಯ ವಿಶೇಷ ಮಹಾಲಿಂಗೇಶ್ವರ ಜಟೋತ್ಸವಕ್ಕೆ ಆಗಮಿಸಿದ್ದ ಗದ್ದಿಗೌಡರ ಹಾಗೂ ಶ್ರೀಮತಿ ಸಂಯುಕ್ತಾ ಪಾಟೀಲ ಅವರು ಜಟೋತ್ಸವ ಮುಗಿಯುವವರೆಗೆ ಭಕ್ತರ ಮಧ್ಯ ಸಾಮಾನ್ಯರಂತೆ ಕುಳಿತು ಜಟಾಭೀಷೇಕ ಮತ್ತು ಮಹಾಲಿಂಗೇಶ್ವರ ದರ್ಶನ, ಆಶೀರ್ವಾದಗಳನ್ನು ಪಡೆದುಕೊಂಡರು. ಲೋಕಸಭೆಯ ಪ್ರತಿಸ್ಪರ್ಧಿಯ ಇಬ್ಬರು ಅಭ್ಯರ್ಥಿಗಳು ಒಟ್ಟಿಗೆ ಯುಗಾದಿ ವಿಶೇಷ ಜಟೋತ್ಸವದಲ್ಲಿ ಭಾಗವಹಿಸಿದ್ದರಿಂದ ಪವಾಡ ಪುರುಷ ಮಹಾಲಿಂಗೇಶ್ವರ ಕೃಪೆ ಯಾರಿಗೆ ಫಲಿಸಲಿದೆ ಎಂಬ ಚರ್ಚೆಯುಲೀ ಭಾಗದ ರಾಜಕೀಯ ವಲಯದಲ್ಲಿ ಜೋರಾಗಿ ನಡೆಯುತ್ತಿದೆ.

**ಕೋಟೆಯ ಅಧಿಪತಿ ಯಾರು? :** ಬಿಜೆಪಿಯ ಪಿ.ಸಿ.ಗದ್ದಿಗೌಡರ 5ನೇ ಬಾರಿಗೂ ವಿಜಯ ಪತಾಕೆ ಹಾರಿಸುತ್ತಾರೋ? ಅಥವಾ ಇದೇ ಮೊದಲ ಬಾರಿಗೆ ಲೋಕಸಭೆ ಚುನಾವಣೆಯ ಕಣದಲಿ ಸ್ಪರ್ಧಿಸಿರುವ ಕಾಂಗ್ರೆಸ್‌ನ ಶ್ರೀಮತಿ ಸಂಯುಕ್ತಾ ಪಾಟೀಲ ಅವರು ಗದ್ದಿಗೌಡರ ಗೆಲುವಿನ ನಾಗಾಲೋಟಕ್ಕೆ ಬ್ರೇಕ್ ಹಾಕಿ ವಿಜಯಶಾಲಿಯಾಗುತ್ತಾರೋ? ಎಂಬುದೇ ಸದ್ಯದ ಕುತೂಹಲ. ಅಂತಿಮವಾಗಿ ಪವಾಡ ಪುರುಷ ಮಹಾಲಿಂಗೇಶ್ವರರ ಕೃಪಾಕಟಾಕ್ಷ ಮತ್ತು ಜಿಲ್ಲೆಯ ಮತದಾರ ಪ್ರಭುಗಳ ಬೆಂಬಲದಿಂದ ಬಾಗಲಕೋಟೆಗೆ ಯಾರು ಅಧಿಪತಿಯಾಗುತ್ತಾರೆ ಎಂಬ ಉತ್ತರಕ್ಕಾಗಿ ಜೂನ್ 4ರ ಫಲಿತಾಂಶದವರೆಗೆ ಕಾಯಬೇಕು.

# ದ್ವಿತೀಯ ಪಿಯು ಫಲಿತಾಂಶ: ರನ್ನಬೆಳಗಲಿ ಶ್ರೀಗುರು ಮಹಾಲಿಂಗೇಶ್ವರ ಕಾಲೇಜು 97%

**ಮಹಾಲಿಂಗಪುರ :** ಸಮೀಪದ ರನ್ನಬೆಳಗಲಿ ಪಟ್ಟಣದ ಬೆಳಗಲಿ ವಿದ್ಯಾವರ್ಧಕ ಸಂಘದ ಶ್ರೀಗುರು ಮಹಾಲಿಂಗೇಶ್ವರ ಪಿಯು ಕಾಲೇಜಿನ 2024ನೇ ಸಾಲಿನ ಪಿಯು ಫಲಿತಾಂಶವು 97% ರಷ್ಟಾಗಿದೆ.ಕಲಾ ವಿಭಾಗದ ಫಲಿತಾಂಶ 97.43%, ವಾಣಿಜ್ಯ ವಿಭಾಗ 96.15% ರಷ್ಟಾಗಿದೆ. ಪರೀಕ್ಷೆ ಬರೆದ 102 ವಿದ್ಯಾರ್ಥಿಗಳಲ್ಲಿ 99 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. 52 ವಿದ್ಯಾರ್ಥಿಗಳು ಉನ್ನತಶ್ರೇಣಿ, 43 ವಿದ್ಯಾರ್ಥಿಗಳು ಪ್ರಥಮ ದರ್ಜೆ, 4 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಪಾಸಾಗಿದ್ದಾರೆ.



ಕಲಾ ವಿಭಾಗ : ಸೀಮಾ ಹಳ್ಳೂರ 576(96%) ಪ್ರಥಮ, ಕೀರ್ತಿ ಹೊಸಪೇಟಿ 575(96%) ದ್ವಿತೀಯ, ಗೌರವ್ವ ಪೂಜಾರಿ 574(96%), ಪ್ರತಿಭಾ ಕುಂಬಾಳಿ 574(96%) ತೃತೀಯ, ಸುಜಾತಾ ಕುರೇರ 573(95%) ಚತುರ್ಥ, ಪ್ರೀತಿ ಕಳ್ಳಿಬಡ್ಡಿ 571(95%) ಐದನೇ ಸ್ಥಾನ ಪಡೆದುಕೊಂಡಿದ್ದಾರೆ.

ವಾಣಿಜ್ಯ ವಿಭಾಗ : ಆರತಿ ಬಿರಾಜನವರ 575(96%) ಪ್ರಥಮ, ಸುಜಾತಾ ಚೌಲದ 575(94.16) ದ್ವಿತೀಯ, ಪ್ರವೀಣ ಬಿಳ್ಳೂರ 560(93.33), ಸಹನಾ ಜಂಬಗಿ 560(93.33) ತೃತೀಯ, ಲಕ್ಷ್ಮೀ ನಾಗರಾಳ 559(93%) ಚತುರ್ಥ, ಸುಜಾತಾ ಬಡಿಗೇರ 545(90%) ಐದನೇ ಸ್ಥಾನ ಪಡೆದಿದ್ದಾರೆ. ಸಾಧಕ ವಿದ್ಯಾರ್ಥಿಗಳನ್ನು ಪ್ರಾಚಾರ್ಯ ಪಿ.ಎಚ್.ನಾಯಕ, ಸಂಸ್ಥೆಯ ಅಧ್ಯಕ್ಷ ದುಂಡಪ್ಪ ಭರಮನಿ, ಕಾರ್ಯದರ್ಶಿ ಪಂಡಿತ ಪೂಜಾರಿ, ಉಪಾಧ್ಯಕ್ಷ ಚಿಕ್ಕಪ್ಪ ನಾಯಕ ಅಭಿನಂದಿಸಿದ್ದಾರೆ.

# ಭಾರತದ ರಣ ಹುಲಿ "ಬ್ಲಾಕ್ ಟೈಗರ್"

ಭಾರತದ ಬೇಹುಗಾರ ರವೀಂದ್ರ ಕೌಶಿಕ್ ಅಲಿಯಾಸ್ ಕಪ್ಪು ಹುಲಿಗೆ ಜನ್ಮದಿನದಂದು ನುಡಿ ನಮನಗಳೊಂದಿಗೆ ಶುಭಾಶಯಗಳನ್ನು ತಿಳಿಸೋಣವೇ..!! ಅನೇಕರಿಗೆ ಯಾರಿವನು ಎನ್ನುವ ಪ್ರಶ್ನೆ ಕಾಡಿದರೆ, ಒಮ್ಮೆ ಇತಿಹಾಸದ ಪುಟಗಳನ್ನು ತಿರುವಿ ನೋಡೋಣ ಬನ್ನಿ.. ಪಬ್ ಜೀ, ಐಪಿ-ಎಲ್, ಇನ್ಸ್ಟಾ ಮತ್ತು ಸಾಮಾಜಿಕ ಜಾಲತಾಣದಲ್ಲಿ ಮುಳುಗಿರುವ ಇಂದಿನ ಯುವ ಪೀಳಿಗೆಯಲ್ಲಿ ರಾಷ್ಟ್ರಭಕ್ತಿಯ ಮತ್ತು ರಾಷ್ಟ್ರಕ್ಕಾಗಿ ಜೀವ ಬಲಿದಾನ ನೀಡಿದವರ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲದಿರುವುದು ವಿಷಾದನೀಯ.

ಪ್ರತಿಯೊಬ್ಬ ತಾಯಿ ಕೂಡ ಹಿಂದೂಸ್ಥಾನವು ಎಂದೂ ಮರೆಯದ ಭಾರತರತ್ನವು ತನ್ನ ಮಡಿಲಲ್ಲಿ ಜನಿಸಲಿ ಎಂಬ ಬಯಕೆ ಹೊಂದಿರುತ್ತಾಳೆ.

ಹುಟ್ಟು ಸಾಮಾನ್ಯವಾದರೂ ಸಾವು ಅಸಾಮಾನ್ಯವಾಗಿರಬೇಕು. ಬದುಕು ಇತರರಿಗೆ ಪ್ರೇರಣೆಯಾಗಿರಬೇಕು. ಪ್ರತಿ ಕ್ಷಣವೂ ಜನ್ಮಭೂಮಿಯ ಹಿತಕ್ಕಾಗಿ ಮನ ತುಡಿಯಬೇಕು. ನಡೆದಾಡಿದ ಭೂಮಿ, ಕುಡಿದ ನೀರು, ಉಸಿರಾಡಿದ ಗಾಳಿ, ಜನ್ಮವೆತ್ತಿದ ಹೆತ್ತವರು, ಸಂಸ್ಕಾರ ನೀಡಿದ ಗುರುಗಳು, ಸಂಸ್ಕೃತಿ ಕಲಿಸಿದ ದೇಶ, ಉದ್ಯೋಗ ನೀಡಿದ ಸಂಸ್ಥೆಗೆ ಸದಾ ಋಣಿಯಾಗಿರಬೇಕೆನ್ನುವುದನ್ನು ತನ್ನ ಜೀವಿತಾವಧಿಯಲ್ಲಿ ತೋರಿಸಿಕೊಟ್ಟ ಭಾರತದ ಅಪ್ರತಿಮ ಬೇಹುಗಾರನೆಂದರೆ ಅವರೇ ಶ್ರೀಯುತ ರವೀಂದ್ರ ಕೌಶಿಕ್. ಶತ್ರುಗಳ ನಾಡಿನಲ್ಲೇ ಶತ್ರುಗಳನ್ನು ಸದೆಬಡೆಯಲು ಹುಲಿಯ ಗುಂಡಿಗೆ ಬೇಕು. ಅಂತಹ ಹುಲಿಯ ಸಾಮರ್ಥ್ಯವನ್ನು ಹೊಂದಿದ್ದ ರಣ-ತಂತ್ರಗಾರ, ರಣ ಹುಲಿ, ಚಾಣಾಕ್ಷ, ಇಂಡಿಯನ್ ಸ್ಪೈ ಅಂದರೆ ಆರ್.ಕೆ. ಅಂದು 56 ಇಂಚಿನ ಎದೆಗಾರಿಕೆಯ ಪ್ರಧಾನಿ ಇದ್ದಿದ್ದರೆ ಎಲ್ಲಾ ಕಡೆಯಿಂದಲೂ ಪಾಪಿ ಪಾಕಿಸ್ತಾನದ ಮೇಲೆ ರಾಜತಾಂತ್ರಿಕ ಒತ್ತಡ ಹೇರಿ ವಿಂಗ್ ಕಮಾಂಡರ್ ಅಭಿನಂದನ್ ವರ್ಧಮಾನ್ ಅವರಂತೆ ಆರ್.ಕೆ. ಅವರನ್ನು ಸಹ ತಾಯ್ನಾಡಿಗೆ ಮರಳಿ ಕರೆತರುತ್ತಿದ್ದರೇನೋ.. ಆದರೆ ಅಂದು ಹಾಗಾಗಲಿಲ್ಲ. ವಿಧಿ ಮೊದಲೇ ಭಾರತದ ಕಪ್ಪು ಹುಲಿಯ ದುರಂತ ಅಂತ್ಯವನ್ನು ...ಬರೆದಿಟ್ಟಿತ್ತು. ಇಂದು ಆ ಕಪ್ಪು ಹುಲಿಗೆ ಜನ್ಮದಿನ. ಅನೇಕರಿಗೆ ಅವರ ಬಗ್ಗೆ ಸಂಪೂರ್ಣ ಮಾಹಿತಿಯೇ ಇಲ್ಲ. ಅವರ ಜನ್ಮದಿನದಂದು ಅವರನ್ನು ಸ್ಮರಿಸುತ್ತ ಅವರಂತಹ ದೇಶಪ್ರೇಮಿಗೆ ನತಮಸ್ತಕ ಗೌರವ ಸಮರ್ಪಣೆ ಮಾಡೋಣ.

11 ನೇ ಎಪ್ರಿಲ್ 1952 ರಂದು ರಾಜಸ್ಥಾನದ ಶ್ರೀಗಂಗಾ ನಗರದ ಬ್ರಾಹ್ಮಣ ಕುಟುಂಬದ ಜೆ.ಎಮ್. ಕೌಶಿಕ್ ಮತ್ತು ಅಮ್ಲಾ ದೇವಿಯವರ ಪುತ್ರನಾಗಿ ಸೂರ್ಯನಂತೆ ಪ್ರಜ್ವಲಿಸುವ ರವೀಂದ್ರ ಅವರ ಜನನವಾಯಿತು. ಇವರ ತಂದೆ ಭಾರತೀಯ ವಾಯುಪಡೆಯ ಅಧಿಕಾರಿಯಾಗಿದ್ದರು. ಇವರ ಬಾಲ್ಯ ಮತ್ತು ಶಿಕ್ಷಣ ಶ್ರೀ ಗಂಗಾನಗರದಲ್ಲೇ ಆಯಿತು. ಎಸ್.ಡಿ ಬಿಹಾನಿ ಪಿ.ಜಿ. ಕಾಲೇಜಿನಿಂದ ಬಿ.ಕಾಮ್ ಪದವಿಯನ್ನು ಪಡೆದರು, ಶಾಲಾ ಕಾಲೇಜುಗಳಲ್ಲಿ ಅತ್ಯಂತ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದ ಇವರು ರಂಗಭೂಮಿ ನಟನೆ ಮತ್ತು ವಿವಿಧ ಚರ್ಚೆಗಳಲ್ಲಿ ಆಸಕ್ತಿಯನ್ನು ಹೊಂದಿದ್ದು, ತಮ್ಮನ್ನು ತಾವು ಈ ಹವ್ಯಾಸಗಳಲ್ಲಿ ತೊಡಗಿಸಿಕೊಂಡಿದ್ದರು.

ದೇಶ ಭಕ್ತಿಯ ಬಿಸಿ ಬಿಸಿ ನೆತ್ತರು ಧಮನಿ ಧಮನಿಯಲಿ ತುಂಬಿಕೊಂಡಿದ್ದ ರವೀಂದ್ರ ಅವರು ಭಾರತ ಮಾತೆಯ ಜಯ ಘೋಷಣೆಯನ್ನು ಎಲ್ಲೆಡೆ ಮೊಳಗಿಸಬೇಕೆಂದು ಬಯಸಿದ್ದರು. ಹಾಗಾಗಿ ಪದವಿ ಪಡೆದ ನಂತರ ಇವರು ರಿಸರ್ಚ್ ಅಂಡ್ ಅನಾಲಿಸಿಸ್ ವಿಂಗ್ ( R&AW ) ಭಾರತದ ವಿದೇಶಿ ಗುಪ್ತಚರ ಸಂಸ್ಥೆಯಲ್ಲಿ ಕೆಲಸಕ್ಕೆ ಸೇರಿದರು. ಈ ಏಜೆನ್ಸಿಯ ಪ್ರಾಥಮಿಕ ಕಾರ್ಯವು ವಿದೇಶಿ ಗುಪ್ತಚರ , ಭಯೋತ್ಪಾದನೆ ನಿಗ್ರಹ , ಪ್ರಸರಣ ನಿಗ್ರಹ , ಭಾರತೀಯ ನೀತಿ ನಿರೂಪಕರಿಗೆ ಸಲಹೆ ನೀಡುವುದು ಮತ್ತು ಭಾರತದ ವಿದೇಶಿ ಕಾರ್ಯತಂತ್ರದ ಹಿತಾಸಕ್ತಿಗಳನ್ನು ಮುನ್ನಡೆಸುವುದು ಆಗಿರುತ್ತದೆ. ಈ ಸಂಸ್ಥೆಯು ಭಾರತದ ಪರಮಾಣು ಕಾರ್ಯಕ್ರಮದ ಭದ್ರತೆಯಲ್ಲಿಯೂ ಕೂಡ ತೊಡಗಿಸಿಕೊಂಡಿದೆ. ಹೆಸರಿನಲ್ಲೇ ರವಿ ಇದ್ದುದ್ದರಿಂದ ಕಾಲಾಂತರದಲ್ಲಿ ಸೂರ್ಯನಷ್ಟೇ ತೇಜಪೂಂಜ ಮತ್ತು ಕಾಯಕನಿಷ್ಠ ಅಧಿಕಾರಿಯೆಂದು ಇವರು ಗುರುತಿಸಲ್ಪಟ್ಟರು.

ಆಗ ಭಾರತ ಮತ್ತು ಪಾಕಿಸ್ತಾನದ ನಡುವಿನ ಸಂಬಂಧ ಹದಗೆಟ್ಟಿತ್ತು. ಇವರಿಗೆ ಪಾಕಿಸ್ತಾನದಲ್ಲಿ ರಹಸ್ಯ ಕಾರ್ಯಾಚರಣೆ ನಡೆಸುವ ಗುರುತರ ಜವಾಬ್ದಾರಿಯನ್ನು ನೀಡಲಾಯಿತು. ಪೂರ್ವ ತಯಾರಿಯ ಹಂತವಾಗಿ ದೆಹಲಿಯಲ್ಲಿ ಎರಡು ವರ್ಷಗಳ ಕಾಲ ತರಬೇತಿ ಪಡೆದರು. ಈ ತರಬೇತಿಯಲ್ಲಿ ಇವರಿಗೆ ಮುಸಲ್ಮಾನರ ಜೀವನ ಶೈಲಿಯೊಂದಿಗೆ ಉರ್ದು ಭಾಷೆಯನ್ನು ಸಹ ಕಲಿಸಲಾಯಿತು. ಪಂಜಾಬ್ನ ರಾಜಸ್ಥಾನದ ಗಡಿಯ ಸಮೀಪವಿರುವ ಶ್ರೀ ಗಂಗಾನಗರದಲ್ಲಿ ಇವರು ಬೆಳೆದುದ್ದರಿಂದ ಇವರಿಗೆ ಪಂಜಾಬಿ ಭಾಷೆಯ ಮೇಲೆ ಹಿಡಿತವಿತ್ತು. ವೃತ್ತಿಯ ಭಾಗವಾಗಿ ಕೌಶಿಕ್ ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡರು. ಸುನ್ನತಿಗೆ ಕೂಡ ಒಳಗಾದರು. ಇವರಿಗೆ "ನಬಿ ಅಹ್ಮದ್ ಶಾಕಿರ್" ಎಂಬ ಕವರ್ ಹೆಸರನ್ನು ಸಹ ನೀಡಲಾಯಿತು. ತರಬೇತಿಯ ನಂತರ 1975 ರಲ್ಲಿ 23ರ ಹರೆಯದ ರವೀಂದ್ರ ಕೌಶಿಕ್ ರನ್ನು ಪಾಕಿಸ್ತಾನಕ್ಕೆ ಕಳುಹಿಸಲಾಯಿತು.

ಕರಾಚಿ ವಿಶ್ವವಿದ್ಯಾನಿಲಯದಲ್ಲಿ ಯಶಸ್ವಿಯಾಗಿ ಪ್ರವೇಶ ಪಡೆದ ರವೀಂದ್ರರು ಅಲ್ಲಿ ಕಾನೂನು ಪದವಿಯನ್ನು ಪಡೆದರು. ಪದವಿಯ ನಂತರ ಕಮಿಷನ್ಡ್ ಅಧಿಕಾರಿಯಾಗಿ ಪಾಕಿಸ್ತಾನದ ಸೇನೆಗೆ ಸೇರಿದರು. ತಮ್ಮ ವೃತ್ತಿ ಕೌಶಲ್ಯತೆಯಿಂದಾಗಿ ಪಾಕಿಸ್ತಾನದ ಸೈನ್ಯವನ್ನು



ರವೀಂದ್ರ ಕೌಶಿಕ್


ಭೇದಿಸಿ ಮೇಜರ್ ಹುದ್ದೆಗೆ ಬಡ್ತಿಯನ್ನು ಪಡೆದರು. ಪಾಕಿಸ್ತಾನದಲ್ಲಿ ಇವರು ಅಮಾನತ್ ಎಂಬ ಸ್ಥಳೀಯ ಹುಡುಗಿಯನ್ನು ವಿವಾಹವಾದರು ಮತ್ತು ಇವರಿಗೆ ಒಬ್ಬ ಮಗನಿದ್ದನು.

ಇವರು 1975 ರಿಂದ 1983 ರಲ್ಲಿ ಸೆರೆಹಿಡಿಯುವವರೆಗೆ ಅಂದರೆ ಎಂಟು ವರುಷಗಳ ಕಾಲ ಭಾರತಕ್ಕಾಗಿ ಬೇಹುಗಾರಿಕೆ ನಡೆಸಿದ್ದರು. ರವೀಂದ್ರ ಕೌಶಿಕ್ ಅಲಿಯಾಸ್ ನಬಿ ಅಹ್ಮದ್ ಶಾಕಿರ್ ಅಲಿಯಾಸ್ ಬ್ಲ್ಯಾಕ್ ಟೈಗರ್ ಎಂದೂ ಕರೆಯಲ್ಪಡುವ ಇವರು ಭಾರತದ ಶ್ರೇಷ್ಠ ಗೂಢಚಾರರಲ್ಲಿ ಒಬ್ಬರೆಂದು ಪರಿಗಣಿಸಲಾಗಿದೆ.

1979 ರಿಂದ 1983 ರವರೆಗೆ ರವೀಂದ್ರ ಕೌಶಿಕ್ ಪಾಕಿಸ್ತಾನದ ಸೇನಾಧಿಕಾರಿಯಾಗಿ ಕಾರ್ಯನಿರ್ವಹಿಸಿದರು. ಭಾರತದ ಖ&ಂಘ ಗೆ ಅಮೂಲ್ಯವಾದ ಮತ್ತು ರಹಸ್ಯ ಮಾಹಿತಿಗಳನ್ನು ಕಳುಹಿಸಿದರು. ಅಂದಿನ ಭಾರತದ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಇವರಿಗೆ 'ಕಪ್ಪು ಹುಲಿ' (Black Tiger) ಎಂಬ ಬಿರುದನ್ನು ನೀಡಿದ್ದರು. ಸೆಪ್ಟೆಂಬರ್ 1983 ರಲ್ಲಿ, ಆರ್&ಎಡಬ್ಲ್ಯು ರವೀಂದ್ರ ಅವರೊಂದಿಗೆ ಸಂಪರ್ಕದಲ್ಲಿರಲು ಇನ್ಯಾತ್ ಮಸಿಹ ಎಂಬ ಕೆಳಮಟ್ಟದ ಕಾರ್ಯಕರ್ತನನ್ನು ಪಾಕಿಸ್ತಾನಕ್ಕೆ ಕಳುಹಿಸಿದ್ದರು. ಆದರೆ ಪಾಕಿಸ್ತಾನದ ಇಂಟರ್ ಸರ್ವಿಸಸ್ ಇಂಟೆಲಿಜೆನ್ಸ್ನ (ಐಎಸ್ಐ) ಜಂಟಿ ಕೌಂಟರ್ ಇಂಟೆಲಿಜೆನ್ಸ್ ಬ್ಯೂರೋ ಮಸಿಹ ಅವರನ್ನು ಹಿಡಿದು ಸತ್ಯವನ್ನು ಬಹಿರಂಗಪಡಿಸಿತು. ಪರಿಣಾಮವಾಗಿ ಕೌಶಿಕ್ ಭಾರತದ ಬೇಹುಗಾರನೆಂದು ಸೆರೆಹಿಡಿದು ಬಂಧಿಸಲಾಯಿತು. ಸಿಯಾಲ್ ಕೋಟ್ನ ವಿಚಾರಣಾ ಕೇಂದ್ರದಲ್ಲಿ ಎರಡು ವರ್ಷಗಳ ಕಾಲ ಇವರಿಗೆ ಚಿತ್ರ ವಿಚಿತ್ರ ಚಿತ್ರಹಿಂಸೆಗಳನ್ನು ನೀಡಲಾಯಿತು. 1985 ರಲ್ಲಿ ಇವರಿಗೆ ಮರಣದಂಡನೆ ವಿಧಿಸಲಾಯಿತು. ನಂತರ ಪಾಕಿಸ್ತಾನದ ಸರ್ವೋಚ್ಚ ನ್ಯಾಯಾಲಯವು ಇವರ ಶಿಕ್ಷೆಯನ್ನು ಜೀವಾವಧಿ ಜೈಲಿಗೆ ಪರಿವರ್ತಿಸಿತು. ಸಿಯಾಲ್ಕೋಟ್, ಕೋಟ್ ಲಖ್ಪತ್ ಸೇರಿದಂತೆ ವಿವಿಧ ನಗರಗಳ ವಿವಿಧ ಜೈಲುಗಳಲ್ಲಿ ಮತ್ತು ಹದಿನಾರು ವರ್ಷಗಳ ಕಾಲ ಮಿಯಾನ್ವಾಲಿ ಜೈಲಿನಲ್ಲಿ ಇವರನ್ನು ಇರಿಸಲಾಗಿತ್ತು.

ಇವರು ಭಾರತದಲ್ಲಿನ ತಮ್ಮ ಕುಟುಂಬಕ್ಕೆ ರಹಸ್ಯವಾಗಿ ಪತ್ರಗಳನ್ನು ಕಳುಹಿಸುವಲ್ಲಿ ಯಶಸ್ವಿಯಾದರು. ಈ ಪತ್ರಗಳು ಇವರ ಹದಗೆಡುತ್ತಿದ್ದ ಆರೋಗ್ಯ ಮತ್ತು ಪಾಕಿಸ್ತಾನಿ ಜೈಲುಗಳಲ್ಲಿ ಇವರು ಎದುರಿಸಿದ ಚಿತ್ರಹಿಂಸೆಗಳು ಮತ್ತು ಆಘಾತವನ್ನು ಬಹಿರಂಗಪಡಿಸಿತು.

ಕುಟುಂಬಕ್ಕೆ ಬರೆದ ಪತ್ರವೊಂದರಲ್ಲಿ, "ಕ್ಯಾ ಭಾರತ್ ಜೈಸೇ ಬಡೇ ದೇಶ್ ಕೆ ಲಿಯೇ ಕುರ್ಬಾನಿ ದೇನೆ ವಾಲೋಂ ಕೋ ಯಹಿ ಮಿಲ್ತಾ ಹೈ?" (ಭಾರತದಂತಹ ದೊಡ್ಡ ದೇಶಕ್ಕಾಗಿ ಪ್ರಾಣ ತ್ಯಾಗ ಮಾಡುವ ಜನರಿಗೆ ಇಂತಹ ದುಸ್ಥಿತಿಯೇ?) ಎಂದು ತಮ್ಮ ಮನದ ವೇದನೆಯನ್ನು ಹೊರ ಹಾಕಿದ್ದರು. ಅತ್ತ ಜೈಲಿನಲ್ಲಿ ರವೀಂದ್ರ ಚಿತ್ರಹಿಂಸೆ ಅನುಭವಿಸುತ್ತಿದ್ದರೆ, ಇತ್ತ ಭಾರತಾಂಬೆಯು ರಕ್ತ ಕಣ್ಣೀರು ಸುರಿಸುತ್ತಿದ್ದಳು. ಆತನ ಕುಟುಂಬದವರು ಮತ್ತು ಬಂಧುಗಳು ಆತನನ್ನು ಭಾರತಕ್ಕೆ ಹಿಂದಿರುಗಿ ಕರೆಸಿಕೊಳ್ಳದವರ ವಿರುದ್ಧ ಹಿಡಿ ಶಾಪ ಹಾಕುತ್ತಿದ್ದರು.



ನವೆಂಬರ್ 2001 ರಲ್ಲಿ, ಅಂದರೆ ಇವರ 49 ನೇ ವಯಸ್ಸಿನಲ್ಲಿ ಪಾಕಿಸ್ತಾನದ ಸೆಂಟ್ರಲ್ ಜೈಲ್ ಮಿಯಾನ್ವಾಲಿಯಲ್ಲಿ ಶ್ವಾಸಕೋಶದ ಕ್ಷಯ ಮತ್ತು ಹೃದ್ರೋಗದಿಂದ ನಿಧನರಾದರೆಂದು ಮಾಹಿತಿಯನ್ನು ನೀಡಲಾಯಿತು. ಇದರ ಹಿಂದಿನ ಸತ್ಯಾಸತ್ಯತೆ, ಅವರ ಹೆಂಡತಿ ಮತ್ತು ಮಗುವಿನ ಬಗ್ಗೆ ಎಲ್ಲೂ ಮಾಹಿತಿ ಇಲ್ಲ. ಒಂದು ರೀತಿಯಲ್ಲಿ ರಹಸ್ಯ ಕಾಪಾಡಿಕೊಂಡು, ವಿಷಯವನ್ನು ಬಹಿರಂಗ ಪಡಿಸಲಿಲ್ಲವೆಂದರೆ ತಪ್ಪಾಗಲಾರದು.

ರವೀಂದ್ರ ಕೌಶಿಕ ಅವರ ಕುಟುಂಬದ ಪ್ರಕಾರ, ಅಂದಿನ ಭಾರತ ಸರ್ಕಾರ ಇವರನ್ನು ಗುರುತಿಸಲು ನಿರಾಕರಿಸಿತು ಮತ್ತು ಸಹಾಯ ಮಾಡಲು ಯಾವುದೇ ಪ್ರಯತ್ನವನ್ನು ಸಹ ಮಾಡಲಿಲ್ಲವೆಂದು ಆರೋಪಿಸಿದರು. ರವೀಂದ್ರರ ಜೀವನದ ಕುರಿತು 2012 ರಲ್ಲಿ ಬಿಡುಗಡೆಯಾದ ಪ್ರಸಿದ್ಧ ಬಾಲಿವುಡ್ ಚಲನಚಿತ್ರ ಏಕ್ ಥಾ ಟೈಗರ್ನ ಕಥಾಹಂದರವು ಆಧರಿಸಿದೆ ಎಂದು ರವೀಂದ್ರರ ಕುಟುಂಬವು ಹೇಳಿಕೊಂಡಿತ್ತು ಮತ್ತು ರವೀಂದ್ರರಿಗಾಗಿ ಚಲನಚಿತ್ರ ಶೀರ್ಷಿಕೆಗಳಲ್ಲಿ ಕ್ರೆಡಿಟ್ ಕೇಳಿತ್ತು. ನಿರ್ದೇಶಕ ಕಬೀರ್ ಖಾನ್ ಅವರು ಇದನ್ನು ನಿರಾಕರಿಸಿದ್ದರು.

2019 ರಲ್ಲಿ ರೋಬಿ ಗ್ರೆವಾಲ್ ಬರೆದು ನಿರ್ದೇಶಿಸಿದ ಭಾರತೀಯ ಚಲನಚಿತ್ರ ರೋಮಿಯೋ ಅಕ್ಬರ್ ವಾಲ್ಟರ್ ಪಾಕಿಸ್ತಾನದಲ್ಲಿನ ಅವರ ಚಟುವಟಿಕೆಗಳನ್ನು ಆಧರಿಸಿದೆ. ಜಾನ್ ಅಬ್ರಹಾಂ ಚಿತ್ರದಲ್ಲಿ ರವೀಂದ್ರ ಕೌಶಿಕ್ ಆಧಾರಿತ ರೆಹಮತುಲ್ಲಾ ಖಾನ್ ಪಾತ್ರವನ್ನು ನಿರ್ವಹಿಸಿದ್ದಾರೆ.

ಒಟ್ಟಿನಲ್ಲಿ ವಂದೇ ಮಾತರಂ ಎಂದು ಉಸಿರಾಡಿ, ಜನ್ಮ ನೀಡಿದ ಮಾತೃಭೂಮಿಯ ರಕ್ಷಣೆಗಾಗಿ, ಭಾರತದ ಹಿತವನ್ನು ಕಾಪಾಡುತ್ತ, ತನ್ನ ಯೌವ್ವನದ ದಿನಗಳನ್ನು ಮಾತ್ರವಲ್ಲ, ಜೀವಿತದ ಹೆಚ್ಚಿನ ಸಮಯವನ್ನು ಜೈಲಿನಲ್ಲಿ ಖೈದಿಯಾಗಿ, ಚಿತ್ರ ವಿಚಿತ್ರ ಕ್ರೂರ ಹಿಂಸೆಗಳನ್ನು ಸಹಿಸಿಕೊಂಡ ಆ ಭಾರತದ ಕಪ್ಪು ಹುಲಿಗೆ ಕ್ಷಮೆಯನ್ನು ಕೋರುತ್ತ, ನಿಮ್ಮಂತಹ ಯೋಗ್ಯ, ಅಪ್ರತಿಮ ಸಾಹಸ ಪುತ್ರ ರತ್ನಗಳನ್ನು ಪಡೆಯುವ ಮತ್ತು ಉಳಿಸಿಕೊಳ್ಳುವ ಸಾಮರ್ಥ್ಯ ಅಂದು ನಮಗಿರಲಿಲ್ಲ. ಇಂದಿನದು ನವಭಾರತ. ಶತ್ರುಗಳನ್ನು ಅವರಿದ್ದ ಸ್ಥಳದಲ್ಲೇ ಹೋಗಿ ಮಟ್ಟ ಹಾಕುವ ಸಾಮರ್ಥ್ಯ 56 ಇಂಚಿನ ಎದೆಗಾರಿಕೆಯ ಪ್ರಧಾನಿಯವರು ಹೊಂದಿದ್ದಾರೆ. ನಮ್ಮ ಖಂಘ ಸಂಸ್ಥೆಯು ಕೂಡ ಮತ್ತಷ್ಟು ತೀವ್ರವಾಗಿ ತನ್ನ ಕಾರ್ಯಾಚರಣೆ ಮಾಡುವಲ್ಲಿ ಸಕ್ರಿಯವಾಗಿದೆ. ನಿಮ್ಮಂತಹ ಹುಲಿಗಳು ಮತ್ತೊಮ್ಮೆ ಈ ಭರತ ಭೂಮಿಯಲ್ಲಿ ಹುಟ್ಟಿ ಬರಲಿ. ಇಂತಹ ಹುಲಿಗಳು ಎದುರಾಳಿಗಳ ಮೈದಾನದಲ್ಲಿ ಬೇಟೆಗೆ ಹೋದಾಗ, ಅವರನ್ನು ರಕ್ಷಿಸಿ, ಸುರಕ್ಷಿತವಾಗಿ ಕರೆದುಕೊಂಡು ಬರುವ ಸಾಮರ್ಥ್ಯವನ್ನು ನಮಗೆ ನೀಡಲಿಯೆಂಬ ಸದಾಶಯದೊಂದಿಗೆ ಕಪ್ಪು ಹುಲಿಗೆ ಅಭಿಮಾನದಿಂದ ನಮನ ಸಲ್ಲಿಸೋಣವೆ..

◆ ಲತಾ ಕೆ.ಎಸ್.ಹೆಗಡೆ
ಬೆಂಗಳೂರು

## ಕ್ಷೇತ್ರದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಿದ್ದೇನೆ

# ಮೋದಿ ಸಾಧನೆಗಳನ್ನು ಮನೆ ಮನೆಗೆ ತಿಳಿಸಿ

**ರಬಕವಿ-ಬನಹಟ್ಟಿ :** ಬಾಗಲಕೋಟೆ ಲೋಕಸಭೆ ಮತಕ್ಷೇತ್ರದ ಅಭಿವೃದ್ಧಿಗಾಗಿ ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಿದ್ದೇನೆ. ಕ್ಷೇತ್ರದ ಮತದಾರರ ಗೌರವ ಉಳಿಸುವ ಕಾರ್ಯವನ್ನು ಮಾಡಿದ್ದೇನೆ. ಇನ್ನು ಮುಂದಿನ ದಿನಗಳಲ್ಲಿಯೂ ಕ್ಷೇತ್ರದ ಅಭಿವೃದ್ಧಿಗಾಗಿ ಮತ್ತು ಮೋದಿಯವರನ್ನು ಮಗುದೊಮ್ಮೆ ಪ್ರಧಾನಿಯನ್ನಾಗಿ ಮಾಡಲು ನಾವೆಲ್ಲರೂ ಶ್ರಮಿಸಬೇಕಾಗಿದೆ ಎಂದು ಬಾಗಲಕೋಟೆ ಲೋಕಸಭಾ ಕ್ಷೇತ್ರದ ಭಾರತೀಯ ಜನತಾ ಪಕ್ಷದ ಅಭ್ಯರ್ಥಿ ಪರ್ವತಗೌಡ ಸಿ. ಗದ್ದಿಗೌಡರ ತಿಳಿಸಿದರು.

ಬುಧವಾರ ರಾಂಪುರದ ದಾನೇಶ್ವರಿ ಸಮುದಾಯ ಭವನದಲ್ಲಿ ಜರುಗಿದ ಬಿಜೆಪಿ ಪಕ್ಷದ ಬೂತ್ ಮಟ್ಟದ ಕಾರ್ಯಕರ್ತರ ಸಮಾವೇಶದಲ್ಲಿ ಅವರು ಮಾತನಾಡಿದರು.

ಪಾರದರ್ಶಕ ಆಡಳಿತ ನೀಡುವುದರ ಜೊತೆಗೆ ದೇಶದ ಕಟ್ಟ ಕಡೆಯ ವ್ಯಕ್ತಿಗೆ ಎಲ್ಲ ರೀತಿಯ ಸೌಲಭ್ಯಗಳು ದೊರೆಯುವಂತೆ ಪ್ರಧಾನಿ ನರೇಂದ್ರ ಮೋದಿ ಮಾಡಿದ್ದಾರೆ. ದೇಶದ ಜನರು ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಅಭಿವೃದ್ಧಿಯನ್ನು ಹೊಂದಿದ್ದು , ಇದು ದೇಶದ ಅಭಿವೃದ್ಧಿಯ ಟ್ರೇಲರ್ ಮಾತ್ರ ಇದ್ದು, ಮುಂದಿನ ದಿನಗಳಲ್ಲಿ ಭಾರತ ವಿಶ್ವದ ಬಲಿಷ್ಠ ರಾಷ್ಟ್ರಗಳಲ್ಲಿ ಒಂದಾಗಲಿದೆ ಎಂದು ಗದ್ದಿಗೌಡರ ತಿಳಿಸಿದರು.

ಶಾಸಕ ಸಿದ್ದೂ ಸವದಿ ಮಾತನಾಡಿ, ದೇಶ, ಧರ್ಮ, ಮಹಿಳೆಯರು ಮತ್ತು ದೇಶದ ಗಡಿಗಳು ಸುಭದ್ರವಾಗಿ ಉಳಿಯಬೇಕಾದರೆ ನಾವೆಲ್ಲರೂ ಮುಂದಿನ ದಿನಗಳಲ್ಲಿ ಪಕ್ಷದ ಅಭಿವೃದ್ಧಿಗಾಗಿ ಸೈನಿಕರಂತೆ ಹಗಲಿರುಳು ಶ್ರಮಿಸಬೇಕಾಗಿದೆ. ದೇಶವನ್ನು ಇಸ್ಲಾಂ ರಾಷ್ಟ್ರವನ್ನಾಗಿಸಲು ಮಾಡಲು ಹೊರಟಿರುವ ಕಾಂಗ್ರೆಸ್ ಪಕ್ಷಕ್ಕೆ ಮತ ಹಾಕಬೇಕೆ ಎಂಬುದನ್ನು ಮತದಾರರು ಚಿಂತನೆ ಮಾಡಬೇಕು.

ಸುಳ್ಳು ಕಾಂಗ್ರೆಸ್ ಪಕ್ಷದ ಮನೆ ದೇವರು.

ಬರಲಿರುವ ಚುನಾವಣೆಯಲ್ಲಿ ತೇರದಾಳ ಮತಕ್ಷೇತ್ರದಿಂದ ಭಾರತೀಯ ಜನತಾ ಪಕ್ಷಕ್ಕೆ ನಾಲ್ವತ್ತು ಸಾವಿರದಷ್ಟು ಮುನ್ನಡೆ ನೀಡಲು ನಾವೆಲ್ಲರೂ ಪ್ರಯತ್ನ ಮಾಡಬೇಕು ಎಂದು ಸವದಿ ತಿಳಿಸಿದರು.

ಜಮಖಂಡಿಯ ಶಾಸಕ ಜಗದೀಶ ಗುಡಗುಂಟಿ, ವೀಕ್ಷಕರಾಗಿ ಆಗಮಿಸಿದ್ದ ಜಗದೀಶ ಹಿರೇಮನಿ, ಮಾಜಿ ಶಾಸಕ ಶ್ರೀಕಾಂತ ಕುಲಕರ್ಣಿ ಮಾತನಾಡಿದರು.

ಜಿ. ಎಸ್. ನ್ಯಾಮಗೌಡ, ಡಿ. ಆರ್. ಪಾಟೀಲ, ಪುಂಡಲೀಕ ಪಾಲಭಾಂವಿ, ಧರೆಪ್ಪ ಉಳ್ಳಾಗಡ್ಡಿ , ಶ್ರೀಶೈಲ ಬೀಳಗಿ, ಸುರೇಶ ಅಕ್ಕಿವಾಟ, ಮನೋಹರ ಶಿರೋಳ, ಸವಿತಾ ಹೊಸೂರ, ಪವಿತ್ರಾ ತುಕ್ಕನ್ನವರ,

ಸುರೇಶ ಚಿಂಡಕ, ಸಿದ್ದನಗೌಡ ಪಾಟೀಲ, ಪ್ರಭು ಹಟ್ಟಿ, ಪ್ರಭು ಬಿಳ್ಳೂರ, ಆನಂದ ಕಂಪು, ಜಿ. ಎಸ್. ಗೊಂಬಿ, ಈರಣ್ಣ ಚಿಂಚಖಂಡಿ, ಅಶೋಕ ರಾವಳ ಸೇರಿದಂತೆ ತೇರದಾಳ ಮತಕ್ಷೇತ್ರದ ಕಾರ್ಯಕರ್ತರು ಭಾಗವಹಿಸಿದ್ದರು.

---

# ರಾಜ್ಯಕ್ಕೆ 9ನೇ ರ್‍ಯಾಂಕ್ ಪಡೆದ ಮಹಾಲಿಂಗಪುರದ ನಂದನ ಮಲ್ಲಾಪೂರ

## ಬಡತನ ಬೆಗುದಿಯಲ್ಲಿ ಅರಳಿದ ಪ್ರತಿಭೆ ನಂದನಗೆ ವೈದ್ಯನಾಗುವ ಬಯಕೆ

**ಚಂದ್ರಶೇಖರ ಮೋರೆ**

**ಮಹಾಲಿಂಗಪುರ :** ಅಪ್ಪನಿಲ್ಲ, ಬಡ ಕುಟುಂಬ, ಜೀವನ ನಿರ್ವಹಣೆಗಾಗಿ ನಿತ್ಯ ಅವರಿವರ ಮನೆಯಲ್ಲಿ ಅಡುಗೆ ಮಾಡುವ ತಾಯಿ. ಇಂತಹ ಬಡತನದ ಬೆಗುದಿಯಲ್ಲಿ ಅರಳಿದ ಪ್ರತಿಭೆ, ಪಟ್ಟಣದ ಬುದ್ನಿಪಿಡಿ ಬಡಾವಣೆಯ ನಿವಾಸಿ, ನಾಗವೇಣಿ ಮಲ್ಲಾಪುರ ಅವರ ಪುತ್ರ ನಂದನ ಮಲ್ಲಾಪುರ ಪಿಯುಸಿ ವಿಜ್ಞಾನ ವಿಭಾಗದಲ್ಲಿ 590 ಅಂಕ ಪಡೆದು ರಾಜ್ಯಕ್ಕೆ 9ನೇ ರ್‍ಯಾಂಕ್‌ಗಳಿಸಿ ಸಾಧನೆಗೆ ಬಡತನ ಅಡ್ಡಿಯಲ್ಲ ಎಂಬುದನ್ನು ನಿರೂಪಿಸಿದ್ದಾನೆ. ಬೆಳೆಯ ಸಿರಿ ಮೊಳಕೆಯಲ್ಲಿ ಎಂಬಂತೆ ಇವನ ಪ್ರತಿಭೆ ಹಾಗೂ ಬಡತನ ಕಂಡು ಸ್ಥಳೀಯ ಜೆಸಿ ಆಂಗ್ಲ ಮಾಧ್ಯಮ ಶಾಲೆಯು ಎಲ್‌ಕೆಜಿಯಿಂದ 10ನೇ ತರಗತಿವರೆಗೆ ಉಚಿತ ಶಿಕ್ಷಣ ನೀಡಿತ್ತು. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ 4ನೇ ರ್‍ಯಾಂಕ್ ಪಡೆದು ಸಂಸ್ಥೆಯವರ ಭರವಸೆ ಈಡೇರಿಸಿದ್ದ ನಂದನನ್ನು ಜಮಖಂಡಿಯ ತುಂಗಳ ಸೈನ್ಸ್ ಪಿಯು ಕಾಲೇಜು ಸಹ ದತ್ತು ಪಡೆದು ಉಚಿತ ಶಿಕ್ಷಣ, ವಸತಿ, ಊಟ ನೀಡಿದ್ದನ್ನು



ಸಾರ್ಥಕ ಮಾಡಿದ ನಂದನ್ ಇದೀಗ ಪಿಯು ಪರೀಕ್ಷೆಯಲ್ಲಿ ರಾಜ್ಯಕ್ಕೆ 9ನೇ ರ್‍ಯಾಂಕ್‌ನೊಂದಿಗೆ, ಬಾಗಲಕೋಟೆ ಜಿಲ್ಲೆಗೆ ದ್ವಿತೀಯ, ಕಾಲೇಜಿಗೆ ಪ್ರಥಮ ಸ್ಥಾನ ಗಳಿಸಿ, ಕಾಲೇಜು ಮತ್ತು ಹೆತ್ತವರ ಕೀರ್ತಿ ಬೆಳಗಿಸಿದ್ದಾನೆ.

ಗಣಿತ, ಜೀವಶಾಸ್ತ್ರ, ರಸಾಯನ ಶಾಸ್ತ್ರದಲ್ಲಿ ತಲಾ 100 ಅಂಕ, ಭೌತಶಾಸ್ತ್ರ ಮತ್ತು ಹಿಂದಿಯಲ್ಲಿ ತಲಾ 98, ಇಂಗ್ಲೀಷ್‌ನಲ್ಲಿ 94 ಅಂಕ ಗಳಿಸಿದ್ದಾನೆ. ಈ ಕುರಿತು ಪತ್ರಿಕೆಯೊಂದಿಗೆ ಮಾತನಾಡಿದ ನಂದನ ವೈದ್ಯನಾಗಿ ಬಡವರ ಸೇವೆ ಮಾಡಬೇಕೆಂಬ ಆಶೆಯನ್ನು ವ್ಯಕ್ತಪಡಿಸಿದ್ದಾನೆ.

ನಂದನ ತಾಯಿ ನಾಗವೇಣಿ ಮಾತನಾಡಿ ನಮ್ಮ ಮಗುವಿಗೆ ಉಚಿತ ಶಿಕ್ಷಣ ನೀಡಿದ ತುಂಗಳ ಕಾಲೇಜಿನ ಅಶೋಕ ತುಂಗಳ, ಲಕ್ಷ್ಮಿ ತುಂಗಳ, ಪ್ರಾಂಶುಪಾಲ ಆರ್.ಜಿ.ಜಾಗೀರದಾರ, ಉಪನ್ಯಾಸಕ ವಿಜಯ ಕುಲಕರ್ಣಿ ಮತ್ತು ಮಹಾಲಿಂಗಪುರದ ಜೆಸಿ ಶಾಲೆಗೆ ನಾವು ಚಿರಋಣಿಯಾಗಿರುತ್ತವೆ ಎಂದು ಮಗನ ಸಾಧನೆಗೆ ಹರ್ಷವ್ಯಕ್ತಪಡಿಸಿದ್ದಾರೆ.

ನಂದನ ತುಂಬಾ ಪ್ರತಿಭಾವಂತ. ಅವನನ್ನು ದತ್ತು ಪಡೆದು ಶಿಕ್ಷಣ ನೀಡಿದ್ದು ಸಾರ್ಥಕವಾಯಿತು. ಅವನಿಗೆ ಮೆಡಿಕಲ್ ಸಿಗುವುದು ಖಂಡಿತ, ಮೆಡಿಕಲ್ ಸಿಕ್ಕಲ್ಲಿ ಅವನ ಮೆಡಿಕಲ್ ಖರ್ಚನ್ನು ನಮ್ಮ ಸಂಸ್ಥೆಯ ವತಿಯಿಂದ ಭರಿಸುತ್ತೇವೆ.

**-ವಿಜಯ ಕುಲಕರ್ಣಿ, ತುಂಗಳ ಪಿಯು ಕಾಲೇಜು. ಜಮಖಂಡಿ**

---

ನಂದನ ಚುರುಕುತನ ಹಾಗೂ ಮನೆಯ ಪರಿಸ್ಥಿತಿ ಕಂಡು ನಮ್ಮ ಸಂಸ್ಥೆಯಿಂದ ಎಲ್‌ಕೆಜಿಯಿಂದ 10ನೇ ತರಗತಿವರೆಗೆ ಉಚಿತ ಶಿಕ್ಷಣ ನೀಡಿದ್ದು ಸಾರ್ಥಕವಾಯಿತು, ಈಗ ಪಿಯುನಲ್ಲಿ 9ನೇ ರ್‍ಯಾಂಕ್ ಗಳಿಸಿದ್ದು ಹಾಗೂ ಎಸ್‌ಎಸ್‌ಎಲ್‌ಸಿಯಲ್ಲಿ ರಾಜ್ಯಕ್ಕೆ 4ನೇ ರ್‍ಯಾಂಕ್ ಗಳಿಸಿದ್ದು ಸ್ಮರಣೀಯ.

**-ಶಿವಾನಂದ ತಿಪ್ಪಾ, ಉಪಾಧ್ಯಕ್ಷರು ನವಚೇತನ ಶಿಕ್ಷಣ ಸಂಸ್ಥೆ, ಮಹಾಲಿಂಗಪುರ.**

---

# ಆರ್.ಡಿ.ಎಸ್. ಪಿ.ಯು ಕಾಲೇಜು ಶೇ 86 ರಷ್ಟು ಫಲಿತಾಂಶ

**ಮೂಡಲಗಿ:** ಇಲ್ಲಿಯ ಆರ್.ಡಿ.ಎಸ್. ಸ್ವತಂತ್ರ ಪದವಿ ಪೂರ್ವ ಮಹಾವಿದ್ಯಾಲಯವು ದ್ವಿತಿಯ ಪಿಯುಸಿ ಪರೀಕ್ಷೆಯಲ್ಲಿ ಶೇ86 ರಷ್ಟು ಫಲಿತಾಂಶವನ್ನು ಪಡೆದುಕೊಂಡಿದೆ ಎಂದು ಕಾಲೇಜು ಪ್ರಾಚಾರ್ಯರು ತಿಳಿಸಿರುತ್ತಾರೆ. ಕಲಾ ವಿಭಾಗದಲ್ಲಿ ರೇವತಿ ಮಲ್ಲಿಮಾರ 573 (ಶೇ 96) ಅಂಕ ಪಡೆದು ಪ್ರಥಮ ವಿದ್ಯಾಶ್ರೀ ಅಳಗೋಡಿ 571 (ಶೇ 95.20) ಅಂಕ ಪಡೆದು ದ್ವಿತಿಯ. ರೇಣುಕಾ ಹಳಸಿ 564 (ಶೇ 94.) ಅಂಕ ಪಡೆದು ತೃತೀಯ. ವಿಜ್ಞಾನ ವಿಭಾಗದಲ್ಲಿ ಅಂಜಲಿ ಮೇಲಪ್ಪಗೋಳ 569 (ಶೇ 95) ಅಂಕ ಪಡೆದು ಪ್ರಥಮ. ರೇಣುಕಾ ಚೌವಡಪ್ಪನವರ 562 ಶೇ(94) ಅಂಕ ಪಡೆದು ದ್ವಿತಿಯ. ಸುಪ್ರೀತಾ ಬ್ಯಾಳಿ 545 ಶೇ (91) ಅಂಕ ಪಡೆದು ತೃತೀಯ ವಾಣಿಜ್ಯ ವಿಭಾಗದಲ್ಲಿ ಪುಷ್ಪಾ ಮಳಲಿ 530 (ಶೇ 88.50) ಅಂಕ ಪಡೆದು ಪ್ರಥಮ. ಸವಿತಾ ದುಂಡಗಿ 497 (ಶೇ 83) ಅಂಕ ಪಡೆದು ದ್ವಿತಿಯ. ಸಮೀರ ನದಾಫ 476 (ಶೇ 80) ಅಂಕ ಪಡೆದು ತೃತೀಯ ಸ್ಥಾನ



ಪಡೆದು ಕೊಂಡಿದ್ದಾರೆ. 56 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ಪಾಸಾಗಿರುತ್ತಾರೆ ಮತ್ತು ವಿಷಯವಾರು 100ಕ್ಕೆ 100 ಅಂಕಗಳನ್ನು ಕನ್ನಡ- 08 ಇತಿಹಾಸ-02 ಸಮಾಜಶಾಸ್ತ್ರ-03 ಶಿಕ್ಷಣಶಾಸ್ತ್ರ-02 ವಿದ್ಯಾರ್ಥಿಗಳು ಪಡೆದುಕೊಂಡಿರುತ್ತಾರೆ. ಪರೀಕ್ಷೆಯಲ್ಲಿ ಸಾಧನೆಗೈದ ಎಲ್ಲ ವಿದ್ಯಾರ್ಥಿಗಳನ್ನು ಸಂಸ್ಥೆಯ ಅಧ್ಯಕ್ಷರಾದ ಸಂತೋಷ ತಮ್ಮಣ್ಣ ಪಾರ್ಶಿ ಹಾಗೂ ಆಡಳಿತ ಮಂಡಳಿ ಸದಸ್ಯರು ಪ್ರಾಚಾರ್ಯರು ಹಾಗೂ ಉಪನ್ಯಾಸಕ ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

---

# ರನ್ನಬೆಳಗಲಿ ಶಿವಲಿಂಗಕ್ಕೆ ರವಿತೇಜ ಸ್ಪರ್ಶ

## ಅಮೃತೇಶ್ವರ ದೇವಸ್ಥಾನದಲ್ಲಿ ಯುಗಾದಿಯಂದು ನಡೆಯುವ ಅಪರೂಪದ ಕ್ಷಣ

**ಮಹಾಲಿಂಗಪುರ :** ಸಮೀಪದ ರನ್ನಬೆಳಗಲಿ ಪಟ್ಟಣದ ಪುರಾತನ ಅಮೃತೇಶ್ವರ ದೇವಾಲಯದಲ್ಲಿ ಯುಗಾದಿ ಮೊದಲ ದಿನವಾದ ಮಂಗಳವಾರ ಸುರ್ಯೋದಯದ ಕಿರಣಗಳು ಶಿವಲಿಂಗದ ಮೇಲೆ ಸ್ಪರ್ಶ ಮಾಡಿದವು. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಿತವಾದ ಪುರಾತನ ದೇವಸ್ಥಾನ ಇದಾಗಿದ್ದು, ಬೆಳಗ್ಗೆ 10-15 ನಿಮಿಷಗಳವರೆಗೆ ಅಪರೂಪದ ದೃಶ್ಯಕ್ಕೆ ಹಲವು ಭಕ್ತರು ಸಾಕ್ಷಿಕರಿಸಿದರು. ಬೆಳಗ್ಗೆ 6.55ಕ್ಕೆ ದೇವಾಲಯ ಪ್ರವೇಶಿಸಿದ ಸೂರ್ಯನ ಕಿರಣಗಳು 10-15 ನಿಮಿಷಗಳವರೆಗೆ ಹಂತಹಂತವಾಗಿ ಲಿಂಗದ ಎದುರು ಹಾಯ್ದವು. ಭಕ್ತರು ಅಪರೂಪದ ದೃಶ್ಯ ಕಣ್ತುಂಬಿಕೊಂಡರು. ಸೂರ್ಯ ಕಿರಣಗಳು ಸ್ಪರ್ಶಿಸುತ್ತಿದ್ದಂತೆ ಅಮೃತೇಶ್ವರ ಲಿಂಗಕ್ಕೆ ಯುಗಾದಿಯ ಮಹಾಪೂಜೆ ನೆರವೇರಿಸಲಾಯಿತು.

ಸಂಪೂರ್ಣ ಸ್ಪರ್ಷಕ್ಕೆ ಗಿಡಗಳು ಅಡ್ಡಿ



: ಸೂರ್ಯ ಕಿರಣಗಳು ಲಿಂಗವನ್ನು ಸ್ಪರ್ಷಿಸಿದವು. ಆದರೆ ಸಂಪೂರ್ಣ ಲಿಂಗಕ್ಕೆ ಸೂರ್ಯಕಿರಣಗಳು ಸ್ಪರ್ಷವಾಗಲು ದೇವಸ್ಥಾನದ ಎದು-ರಿನ ತೆಂಗಿನ ಮರಗಳು ಅಲ್ಪಸ್ವಲ್ಪ ಅಡ್ಡಿಯಾಗಿದ್ದವು. ಮುಂದಿನ ಬಾರಿ ದೇವಸ್ಥಾನ ಎದುರಿನ ಗಿಡಗಳನ್ನು ತೆರವುಗೊಳಿಸಿ ಸಂಪೂರ್ಣ ಶಿವಲಿಂಗಕ್ಕೆ ರವಿತೇಜ ಸ್ಪರ್ಶದ ಅಪರೂಪದ ದೃಶ್ಯವನ್ನು ನೋಡಲು ಅನೂಕೂಲ ಮಾಡೋಣ ಎಂದು ಅಲ್ಲಿ ನೆರೆದಿದ್ದ ಪಟ್ಟಣದ ಹಿರಿಯರು ನಿಶ್ಚಯಿಸಿದರು.

ಪಂಡಿತ ಪೂಜೇರಿ, ರಾಘವೇಂದ್ರ ನೀಲನ್ನವರ, ಪರಮಾನಂದ ಹಿಪ್ಪರಗಿ, ಗೋವಿಂದಗೌಡ ಪಾಟೀಲ, ರಾಮನಗೌಡ ಪಾಟೀಲ, ವೆಂಕಣ್ಣ ಬಿರಾದರ, ಚನ್ನಪ್ಪ ತೋಳನೂರ, ಶಿವಕುಮಾರ ಪಾಟೀಲ, ವಿಜಯಕುಮಾರ ಸಬಕಾಳೆ, ಶಿವಾನಂದ ಹುಣಶ್ಯಾಳ, ರಾಮಪ್ಪ ಜಮಖಂಡಿ, ನಾಗಪ್ಪ ಗರಗದ, ಕೆ.ಎಸ್.ಸಿದ್ನಾಳ, ಮಹಾಲಿಂಗ ಒಂಟಗೋಡಿ, ಯಲ್ಲಪ್ಪ ಅಮಾತಿ ಸೇ-ರಿದಂತೆ ಹಲವರು ಇದ್ದರು.

---

# ತೇರದಾಳದ ಅಕ್ಷತಾ ಜಿಲ್ಲೆಗೆ ಮೂರನೇ ಸ್ಥಾನ



**ತೇರದಾಳ :** ತಂದೆ ತೀರಕೊಂಡಿದ್ದರು ತಾಯಿಯ ಮಮತೆಯಲ್ಲಿ ಬೆಳೆದ ಇಲ್ಲಿನ ಜೆವಿ ಮಂಡಳ ಸ್ವತಂತ್ರ ಪಪೂ ಮಹಾವಿದ್ಯಾಲಯದ ಅಕ್ಷತಾ ಸಾರಾಪುರ ದ್ವಿತೀಯ ಪಿಯು ವಾಣಿಜ್ಯ ವಿಭಾಗದಲ್ಲಿ 589(98.16) ಅಂಕ ಪಡೆದು ಕಾಲೇಜಿಗೆ ಪ್ರಥಮ ಜಿಲ್ಲೆಗೆ ಮೂರನೇ ರ್‍ಯಾಂಕ್ ಪಡೆದುಕೊಂಡಿದ್ದಾಳೆ.

ಕಡು ಬಡತನದಲ್ಲಿಯೇ ಬೆಳೆದ ಅಕ್ಷತಾ 12 ವರ್ಷಗಳ ಹಿಂದೆಯೇ ತಂದೆಯನ್ನು ಕಳೆದುಕೊಂಡಿದ್ದಾಳೆ. ತಮ್ಮ ಒಬ್ಬನಿದ್ದು ಅವನು ಕೂಡ ವಿಶೇಷಚೇತನ ಆಗಿದ್ದಾನೆ. ಆದರೂ ಅಕ್ಷತಾ ತಾಯಿ ಸುಜಾತಾ ಯಾವುದಕ್ಕೂ ಹೆದರದೆ ಮಗಳಿಗೆ ಶಿಕ್ಷಣ ಕೊಡಿಸುವ ಕೆಲಸ ಮಾಡಿದ್ದಾರೆ.

ಸೋದರಮಾವ ಶಿಕ್ಷಣಕ್ಕೆ ಸಹಾಯ ಮಾಡಿದ್ದಾನೆ. ಬಡತನದಲ್ಲಿಯೂ ತನಗೆ ಶಿಕ್ಷಣ ಕೊಡಿಸಿದ ಪಾಲಕರ ಹೆಸರು ತರಬೇಕೆಂದು ನಿರಂತರವಾಗಿ ಅದ್ಯಯನ ಮಾಡಿ ದ್ವಿತೀಯ ಪಿಯು ನಲ್ಲಿ ಸಾಧನೆ ಮಾಡಿದ್ದಾಳೆ. ಅಕ್ಷತಾಳ ಶ್ರಮಕ್ಕೆ ಕಾಲೇಜಿನ ಪ್ರತಿಯೊಂದು ವಿಷಯದ ಉಪನ್ಯಾಸಕರು ಸಾಕಷ್ಟು ಸಾಥ್ ನೀಡಿದ್ದಾರೆ. ಅಕ್ಷತಾ ಮನೆಗೆ ತೆರಳಿ ಅಭಿನಂದಿಸಿದ ಸಂಸ್ಥೆ ಕಾರ್ಯದರ್ಶಿ ಡಾ. ಜೆ.ಬಿ. ಆಲಗೂರ, ಶಿಕ್ಷಣ ಅರ್ಧಕ್ಕೆ ಬಿಡಬೇಡ. ಅಗತ್ಯ ಬಿದ್ದರೆ ಸಂಸ್ಥೆ ವತಿಯಿಂದ ಸಹಾಯ ಮಾಡುವುದಾಗಿ ಭರವಸೆ ನೀಡಿದ್ದಾರೆ.

ಮಗಳ ಸಾಧನೆಗೆ ತಾಯಿ ಸುಜಾತಾ ಆನಂದ ಬಾಷ್ಪ ಹಾಕಿದ್ದಾರೆ. ಪ್ರಾಚಾರ್ಯ ಸಂತೋಷ ಕುಳ್ಳಿ, ಉಪನ್ಯಾಸಕರಾದ ಎಸ್.ಪಿ. ದೊಡವಾಡ, ಎಂ.ಎಸ್. ಹುದ್ದಾರ, ಆರ್.ಕೆ. ತೇರದಾಳ,

ಪಿ.ಎಸ್. ವಲ್ಯಾಪುರ, ಪಿ.ಕೆ. ಮಾಸ್ತಿ, ಪಿ.ಎಸ್. ನಾರವ್ವಗೋಳ, ಕೆ. ಚಿಂಚಲಿ, ವಿಶಾಲ ಕಾಂಬಳೇಕರ ಹಾಗೂ ಮಹಾಂತೇಶ ಜಗದಾಳ ಅಕ್ಷತಾ ಮನೆಗೆ ತೆರಳಿ ಅಭಿನಂದಿಸಿದರು.

---

# ಪರೀಕ್ಷಾ ಫಲಿತಾಂಶಕ್ಕೆ ಸೆಲ್ಫಿ ಬಾಕ್ಸ್ ಆಕರ್ಷಣೆ




**ಮಹಾಲಿಂಗಪುರ :** ಸ್ಥಳೀಯ ಕೆ.ಎಲ್.ಇ ಸಂಸ್ಥೆಯ ಎಸ್.ಸಿ.ಪಿ ಪ್ರಾಥಮಿಕ ಶಾಲೆಯ ಆವರಣದಲ್ಲಿ ಏ.10 ರಂದು ಪರೀಕ್ಷಾ ಫಲಿತಾಂಶ ವೀಕ್ಷಿಸಲು ಬರುವ ಮಕ್ಕಳು ಮತ್ತು ಪಾಲಕ-ರಿಗೆ ವಿಶೇಷ ಅಲಂಕೃತ ಸೆಲ್ಫಿ ಬಾಕ್ಸ್ ಗಮನ ಸೆಳೆಯಿತು.

ಶಾಲೆಯ ಎಲ್‌ಕೆಜಿಯಿಂದ 7ನೇ ತರಗತಿ ವಿದ್ಯಾರ್ಥಿಗಳ ಫಲಿತಾಂಶ ಪ್ರಕಟಿಸಲಾಗಿತ್ತು. ವೀಕ್ಷಣೆಗೆ ಪಾಲಕರೊಂದಿಗೆ ಬಂದ ಮಕ್ಕಳು ಅಂಕಪಟ್ಟಿಯೊಂದಿಗೆ ಸೆಲ್ಫಿ ಬಾಕ್ಸ್‌ನಲ್ಲಿ ನಿಂತು ಕ್ಯಾಮೆರಾಗೆ ಪೋಜ್ ಕೊಟ್ಟು ಸಂಭ್ರಮಿಸಿದರು. ಪಾಲಕರು ಮತ್ತು ಶಿಕ್ಷಕರು ಕೂಡ ಪಾಸಾಜ ಮಕ್ಕಳೊಂದಿಗೆ ಸೆಲ್ಫಿಗೆ ಮುಖ ಕೊಟ್ಟು ಸಡಗರ ಹಂಚಿಕೊಂಡರು.

---

# ವ್ಯಕ್ತಿ ಕಾಣೆ

# ಪತ್ತೆಗೆ ಸಹಕರಿಸಲು ಮನವಿ

**ಕೊಪ್ಪಳ :** ಭಾಗ್ಯನಗರ ನಿವಾಸಿಯಾದ ಬಸವರಾಜ ಸಿದ್ದನಗೌಡ ಬುಡ್ಡನಗೌಡ್ರು ಎಂಬ 50 ವರ್ಷದ ವ್ಯಕ್ತಿಯು ಫೆಬ್ರವರಿ 21 ರಿಂದ ಕಾಣೆ-ಯಾಗಿದ್ದು, ಈವರೆಗೂ ಪತ್ತೆಯಾಗಿರುವುದಿಲ್ಲ.

ಈ ಬಗ್ಗೆ ಕೊಪ್ಪಳ ನಗರ ಪೊಲೀಸ್ ಠಾಣೆಯಲ್ಲಿ ಗುನ್ನೆ ನಂ.41/2024 ಕಲಂ ಮನುಷ್ಯ ಕಾಣೆ ಅಡಿ ಪ್ರಕರಣ ದಾಖಲಾಗಿದೆ.



**ವ್ಯಕ್ತಿಯ ಚಹರೆ:** ವ್ಯಕ್ತಿಯು 5.2 ಅಡಿ ಎತ್ತರವಿದ್ದು, ಸಾದಾಕಪ್ಪು ಮೈಬಣ್ಣ, ದುಂಡು ಮುಖ ಹೊಂದಿದ್ದಾರೆ. ಕಾಣೆಯಾದಾಗ ನೀಲಿ ಬಣ್ಣದ ತುಂಬು ತೋಳಿನ ಅಂಗಿ ಮತ್ತು ಲುಂಗಿ ಧರಿಸಿದ್ದರು. ಕನ್ನಡ ಭಾಷೆ ಮಾತನಾಡುತ್ತಾರೆ.

ಮೇಲ್ಕಂಡ ಚಹರೆಯ ವ್ಯಕ್ತಿಯ ಬಗ್ಗೆ ಯಾರಿಗಾದರೂ ಮಾಹಿತಿ ಇದ್ದಲ್ಲಿ ಅಥವಾ ದೊರೆತಲ್ಲಿ ಕೊಪ್ಪಳ ಕಂಟ್ರೋಲ್ ರೂಂ: 08539-230100, 230222, ನಗರ ಠಾಣೆ ಪಿಐ ಮೊ.ಸಂ: 9480803745, ನಗರ ಠಾಣೆ ದೂ.ಸಂ: 08539-220333 ಗೆ ಸಂಪರ್ಕಿಸಿ ಮಾಹಿತಿ ನೀಡಬೇಕು ಎಂದು ನಗರ ಪೊಲೀಸ್ ಠಾಣೆ ಪ್ರಕಟಣೆ ಕೋರಿದೆ.

---

# ಮತದಾರರ ಜಾಗೃತಿ ಜಾಥಾ



**ರಬಕವಿ-ಬನಹಟ್ಟಿ :** ಅವಳಿ ನಗರದಲ್ಲಿ ತಾಲೂಕು ಸ್ವೀಪ್ ಸಮಿತಿಯಿಂದ ರಾಷ್ಟ್ರೀಯ ಮತದಾರರ ಜಾಗೃತಿ ಜಾಥಾ ನಡೆಯಿತು.

ಜಾಥಾಗೆ ಚಾಲನೆ ನೀಡಿ ಮಾತನಾಡಿದ ತಹಶೀಲ್ದಾರ ಗಿರೀಶ ಸ್ವಾದಿ, ಮತದಾನ ಅತ್ಯಂತ ಪವಿತ್ರವಾದ ಕಾರ್ಯ. ಹಾಗಾಗಿ ಪ್ರತಿಯೊಬ್ಬರೂ ಮತದಾರರ ಪಟ್ಟಿಗೆ ಹೆಸರು ನೋಂದಣಿ ಮಾಡಿಸಬೇಕು. ಈ ಬಗ್ಗೆ ಶಾಲಾ-ಕಾಲೇಜುಗಳಲ್ಲಿ ಎಲ್ಲಾ ಹಂತಗಳಲ್ಲಿಯೂ ಜನರಲ್ಲಿ ಜಾಗೃತಿ ಮೂಡಿಸಬೇಕೆಂದರು.


ಚುನಾವಣಾಧಿಕಾರಿ ಸಾಜೀದ್ ಮುಲ್ಲಾ ಮಾತನಾಡಿ, ಲೋಕಸಭಾ ಚುನಾವಣೆ ಹಿನ್ನೆಲೆ ಮತದಾರರು ತಪ್ಪದೇ ಮತದಾನ ಮಾಡುವ ದಿಶೆಯಲ್ಲಿ ನೂರಾರು ಅಧಿಕಾರಿ, ಸಿಬ್ಬಂದಿಗಳ ನೇತೃತ್ವದಲ್ಲಿ ಜಾಗೃತಿ ಜಾಥಾ ನಡೆಸಿ ಅರಿವು ಮೂಡಿಸುವ ಕೆಲಸ ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ನಗರಸಭೆ ಪೌರಾಯುಕ್ತ ಜಗದೀಶ ಈಟಿ, ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಶ್ಯಾಮಸುಂದರ ಕಾಂಬಳೆ, ನಗರಸಭೆ ಕಂದಾಯ ಅಧಿಕಾರಿ ವಸಂತ ಪವಾರ ಸೇರಿದಂತೆ ಸರ್ಕಾರಿ ಇಲಾಖೆಗಳ ಅನೇಕ ಅಧಿಕಾರಿ ಹಾಗೂ ಸಿಬ್ಬಂದಿಗಳು, ಅಂಗನವಾಡಿ ಕಾರ್ಯಕರ್ತೆಯರು ಜಾಗೃತಿ ಜಾಥಾದಲ್ಲಿ ಭಾಗವಹಿಸಿದ್ದರು.

---

## ಅಶೋಕ ಚಂದರಗಿಗೆ 'ಕರ್ನಾಟಕ ಚೂಡಾಮಣಿ' ಪ್ರಶಸ್ತಿ

**ಬೆಳಗಾವಿ :** ಇಲ್ಲಿನ ಹಿರಿಯ ಪತ್ರಕರ್ತ ಹಾಗೂ ಕನ್ನಡ ಪರ ಹೋರಾಟಗಾರ ಅಶೋಕ ಚಂದರಗಿ ಅವರಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಕೇಂದ್ರ ಕನ್ನಡ ಕ್ರಿಯಾ ಸಮಿತಿಯು ಪ್ರತಿಷ್ಠಿತ 'ಕರ್ನಾಟಕ ಚೂಡಾಮಣಿ ' ಪ್ರಶಸ್ತಿಯನ್ನು ಘೋಷಿಸಿದ್ದು, ಎಪ್ರೀಲ್



21 ರಂದು ಬೆಳಿಗ್ಗೆ ಹನ್ನೊಂದು ಗಂಟೆಗೆ ಧಾರವಾಡದ ವಿದ್ಯಾವರ್ಧಕ ಸಂಘದ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಅದ್ದೂರಿಯಾಗಿ ನಡೆಯಲಿದೆ. ಈ ಸಂದರ್ಭದಲ್ಲಿ ನಮ್ಮ ಕನ್ನಡ ದಿನ ಪತ್ರಿಕೆ ಬಳಗದಿಂದ ಅಶೋಕ ಚಂದರಗಿ ಅವರಿಗೆ ಹಾರ್ದಿಕ ಅಭಿನಂದನೆಗಳು.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State